ವಿಜಯಪುರ | ಸಂಪುಟ 02 | ಸಂಚಿಕೆ 237 | ಪುಟ 4 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com RNI NO: KARKAN/2023/86203 ಗುರುವಾರ, ನವೆಂಬರ್ 14, 2024

"ಕಾಂಗ್ರೆಸ್ ಸರ್ಕಾರ ಕೇವಲ ಮಾತಿಗಷ್ಟೇ ಸರ್ಕಾರವಾಗಿದ್ದು, ಕಾರ್ಯಗಳು ಮಾತ್ರ ಶೂನ್ಯ. ರೈತರು ಇಂದು ಜಮೀನಗಳನ್ನು ಕಳೆದುಕೊಂಡು ಬೀದಿ ಪಾಲಾಗುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಅವರಿಗೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿರಂತರವಾಗಿರುತ್ತದೆ."



■ ರಮೇಶ ಭೂಸನೂರ
ಮಾಜಿ ಶಾಸಕರು, ಸಿಂದಗಿ

## ಕಾಲುವೆ ನೀರು ಕಟ್ ತೊಗರಿ ಬೆಳೆಗಾರರು ಕಂಗಾಲು

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ಇಂಡಿ ಶಾಖಾ ಕಾಲುವೆಯ ಉಪ ಕಾಲುವೆಯಲ್ಲಿ ಸಧ್ಯ ನೀರಿನ ಹರಿವು ಕಟ್ ಆಗಿದೆ. ಪರಿಣಾಮ ಈ ನೀರನ್ನೆ ಅವಲಂಬಿಸಿದ ತೊಗರಿ ಬೆಳೆಗಾರರು ನೀರಿಲ್ಲದೆ ಕಂಗಾಲಾಗಿದ್ದಾರೆ.

ಹೌದು, ತಾಲೂಕಿನಲ್ಲಿ ಈ ವರ್ಷ ಅಪಾರ ಪ್ರಮಾಣದ ತೊಗರಿ ಬೆಳೆ ಇದೆ. ಆರಂಭದಲ್ಲಿ ತಕ್ಕ ಮಳೆಯಾದ ಪರಿಣಾಮ ಈ ಬೆಳೆ ಇಲ್ಲಿಯವರೆಗೆ ಚೆನ್ನಾಗಿ ಬೆಳೆದಿತ್ತು. ಈಗ ತೊಗರಿ ಬೆಳೆ ಹೂ, ಕಾಯಿ ಕಟ್ಟುವ ಹಂತದಲ್ಲಿದೆ. ಸಧ್ಯ ಮಳೆ ಕೈಕೊಟ್ಟಿದೆ. ಕಾಲುವೆ ನೀರಾದರೂ ಬಿಟ್ಟು ಬೆಳೆ ಉಳಿಸಿಕೊಳ್ಳಬೇಕು ಎಂದರೆ ಕಾಲುವೆ ನೀರು ಕೈಕೊಟ್ಟಿದೆ. ಇದರಿಂದಾಗಿ ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದ ರೈತರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಬಡವರ ಬೆಳೆ ತೊಗರಿ ಬೆಳೆ ಕಡಿಮೆ ನೀರಿನಲ್ಲಿ ಉತ್ತಮ ಇಳುವರಿ ಪಡೆಯುವ ಬೆಳೆ. ಈಗಾಗಲೆ ರೈತರು ಬೀಜಕ್ಕೆ, ಗೊಬ್ಬರಕ್ಕೆ, ಕೀಟಗಳ ಬಾಧೆ ತಡೆಯಲು ಕ್ರಿಮಿನಾಶಕಕ್ಕೆ, ಎಡೆ ಹೊಡೆಯಲು, ಕಳೆ ತೆಗೆಯಲು ಸಾಕಷ್ಟು ಖರ್ಚು ಮಾಡಿದ್ದಾರೆ. ಇನ್ನೇನು ಬೆಳೆ ಹೂ, ಕಾಯಿ ಕಟ್ಟುವ ಹಂತದಲ್ಲಿದೆ. ಕಾಲುವೆಯ ಮೂಲಕ ಹರಿಯುವ ಕೃಷ್ಣೆಯ ನೀರನ್ನು ಬಿಟ್ಟು ಬೆಳೆ ಬೆಳೆಯಬೇಕು ಎನ್ನುವಷ್ಟರಲ್ಲಿ ನೀರು ಕೈಕೊಟ್ಟಿದೆ. ರೈತರು ಕಂಗಾಲಾಗಿದ್ದಾರೆ.

ಜನಪ್ರತಿನಿಧಿಗಳು ಧ್ವನಿ ಎತ್ತುತ್ತಿಲ್ಲ, ಸಂಬಂಧಸಿದ ಅಧಿಕಾರಿಗಳು ಮೇಲಾಧಿಕಾರಿಗಳ ಸೂಚನೆಯತ್ತ ಚಿತ್ತ ಹರಿಸಿದ್ದಾರೆ.

ದೇವರು ವರ ಕೊಟ್ಟರೆ ಪೂಜಾರಿ ವರ ಕೊಡುತ್ತಿಲ್ಲ ಎಂಬಂತೆ, ಈ ಬಾರಿ ಕೃಷ್ಣಾ ತೀರದಲ್ಲಿ ಉತ್ತಮ ಮಳೆಯಾಗಿದೆ. ಆಲಮಟ್ಟಿ ಜಲಾಶಯ ಭರ್ತಿಯಾಗಿದೆ. ಕೆಳ ಭಾಗದ ಬಸವಸಾಗರ ಜಲಾಶಯವೂ ಭರ್ತಿಯಾಗಿದೆ. ಆದರೆ ಕಾಲುವೆಯಲ್ಲಿ ಮಾತ್ರ ನೀರಿಲ್ಲ. ಇದರಿಂದಾಗಿ ಸಧ್ಯ ತೊಗರಿ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಇನ್ನಾದರೂ ಸರ್ಕಾರ ಕೂಡಲೆ ಇತ್ತ ಗಮನಹರಿಸಿ ಬೇಗನೇ ಕಾಲುವೆ ನೀರು ಹರಿಸಬೇಕು. ಇಲ್ಲವಾದರೆ ಮುಂಬರುವ ದಿನಗಳಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವದು ಎಂದು ಲಚ್ಯಾಣ, ಲೋಣ ,ಕೆ.ಡಿ, ಆಳೂರ, ಅಹಿರಸಂಗ, ಪಡನೂರ, ಬರಗೂಡಿ, ಮಾವಿನಹಳ್ಳಿ ಗ್ರಾಮದ ರೈತರು ಎಚ್ಚರಿಸಿದ್ದಾರೆ.

## ಮೂರು ಕ್ಷೇತ್ರಗಳಲ್ಲಿ ಮತದಾನ ಅಂತ್ಯ | ಚನ್ನಪಟ್ಟಣದಲ್ಲಿ ದಾಖಲೆಯ ಶೇ.88 ರಷ್ಟು ಮತದಾನ | ಒಟ್ಟಾರೆ ಶೇ.76.9 ಮತದಾನ

# ಉಪ ಚುನಾವಣೆ: ಅಭ್ಯರ್ಥಿಗಳ ಭವಿಷ್ಯ ಇವಿಎಂನಲ್ಲಿ ಭದ್ರ

ಬೆಂಗಳೂರು: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಉಪ ಚುನಾವಣೆ ನಡೆದಿದ್ದು, ಸಂಡೂರು, ಶಿಗ್ಗಾಂವಿ ಹಾಗೂ ಚನ್ನಪಟ್ಟಣದಲ್ಲಿ ಮತದಾನ ಪ್ರಕ್ರಿಯೆ ಅಂತ್ಯಗೊಂಡಿದೆ. ಇದರೊಂದಿಗೆ ಅಭ್ಯರ್ಥಿಗಳ ಭವಿಷ್ಯ ಇವಿಎಂನಲ್ಲಿ ಭದ್ರವಾಗಿದೆ.

ಬುಧವಾರ ಬೆಳಗ್ಗೆ 7 ಗಂಟೆಯಿಂದ ಆರಂಭವಾಗಿದ್ದ ಮತದಾನ ಸಂಜೆ 6 ಗಂಟೆಗೆ ಮುಕ್ತಾಯಗೊಂಡಿದ್ದು, ಮೂರು ಕ್ಷೇತ್ರಗಳಲ್ಲಿ ಒಟ್ಟಾರೆ ಶೇ. 76.9 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಹೈವೋಲ್ಟೇಜ್ ಕ್ಷೇತ್ರ


ಚನ್ನಪಟ್ಟಣದಲ್ಲಿ ಎನ್‌ಡಿಎ ಮೈತ್ರಿ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ, ಕಾಂಗ್ರೆಸ್‌ನಿಂದ ಸಿ. ಪಿ. ಯೋಗೇಶ್ವರ್ ಸೇರಿದಂತೆ 31 ಮಂದಿ ಕಣದಲ್ಲಿದ್ದಾರೆ.

ಇನ್ನು ಸಂಡೂರಿನಲ್ಲಿ ಶೇ.76.24 ರಷ್ಟು ಹಾಗೂ ಶಿಗ್ಗಾಂವಿಯಲ್ಲಿ ಶೇ.80.48ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಸಂಡೂರಲ್ಲಿ ಕಾಂಗ್ರೆಸ್‌ನ ಇ. ಅನ್ನಪೂರ್ಣ, ಬಿಜೆಪಿಯಿಂದ ಬಂಗಾರು ಹನುಮಂತ ಸೇರಿ 6 ಹುರಿಯಾಳುಗಳು ಕಣದಲ್ಲಿದ್ದಾರೆ.

ಶಿಗ್ಗಾಂವಿಯಲ್ಲಿ ಬಿಜೆಪಿಯಿಂದ ಭರತ್ ಬೊಮ್ಮಾಯಿ, ಕಾಂಗ್ರೆಸ್‌ನಿಂದ ಪಠಾಣ್ ಯಾಸೀರ್ ಅಹ್ಮದ್‌ಖಾನ್ ಸೇರಿದಂತೆ 8 ಅಭ್ಯರ್ಥಿಗಳಿದ್ದಾರೆ.

ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಹರಸಾಹಸ ಪಟ್ಟಿದ್ದಾರೆ. ಇದಕ್ಕಾಗಿ ಹಲವು ರೀತಿ ತಂತ್ರ, ಪ್ರತಿತಂತ್ರಗಳ ಮೂಲಕ ಪ್ರಚಾರ ನಡೆಸಿದ್ದರು.







### ಚನ್ನಪಟ್ಟಣದಲ್ಲಿ ದಾಖಲೆಯ ಮತದಾನ

ಜಿದ್ದಾ ಜಿದ್ದಿನ ಕಣವಾಗಿ ಮಾರ್ಪಟ್ಟಿರುವ ಬೊಂಬೆ ನಾಡು ಚನ್ನಪಟ್ಟಣದಲ್ಲಿ ದಾಖಲೆಯ ಶೇ. 88.80 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

## ನಾಲ್ಕನೇ ದಿನಕ್ಕೆ ಕಾಲಿಟ್ಟ ಅಂಗನವಾಡಿ ಕಾರ್ಯಕರ್ತೆ ಧರಣಿ




■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಪಟ್ಟಣದ ಪಿ.ಕೆ ನಗರದ ಅಂಗನವಾಡಿ ನಂ-1 ರ ಕಾರ್ಯಕರ್ತೆ ಶಾಂತಾ ಮಾಮನಿ ತಮಗೆ ನ್ಯಾಯ ಕೊಡಿಸುವಂತೆ ಆಗ್ರಹಿಸಿ ಇಲ್ಲಿನ ತಹಶೀಲ್ದಾರ ಕಚೇರಿಯ ಆವರಣದಲ್ಲಿ ತಮ್ಮ ಬೆಂಬಲಿಗರೊಂದಿಗೆ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಮೂರು ದಿನಗಳನ್ನು ಪೂರೈಸಿ ನಾಲ್ಕನೇ ದಿನಕ್ಕೆ ಕಾಲಿರಿಸಿದೆ.

ಧರಣಿ ಸ್ಥಳದಲ್ಲಿ ಹೋರಾಟಗಾರ್ತಿ ಮಾಮನಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ನನಗೆ ಇಲಾಖೆಯಿಂದಲೇ ಅನ್ಯಾಯವಾಗಿದ್ದು ಹೋರಾಟ ನಡೆದು ಮೂರು ದಿನಗಳು ಕಳೆದರೂ ಸೌಜನ್ಯಕ್ಕೂ ಯಾರೊಬ್ಬ ಅಧಿಕಾರಿಯೂ ಬಂದು ಭೇಟಿ ನೀಡಿಲ್ಲ.

ನನಗೆ ಸೂಕ್ತ ನ್ಯಾಯ ಸಿಗುವವರೆಗೂ ನಾನು ಧರಣಿ ಕೈಬಿಡೊಲ್ಲ ಎಂದು ಕಣ್ಣೀರಿಡುತ್ತ ಹೇಳಿದರು.

ಈ ವೇಳೆ ರಾಜಶ್ರೀ ಮಮದಾಪೂರ, ವಿದ್ಯಾ ಮುರಾಳ, ಎಸ್.ಎ.ಹುನಶ್ಯಾಳ, ಸಾಹೆಬ್ಬೀ ಕೆಸರಟ್ಟಿ, ನಿಂಬಕ್ಕ ಕಾಳಾಪೂರ, ಶ್ವೇತಾ ಚಟ್ಟರಕಿ, ಜುಲೇಖಾ ದಾಂಡಿಯಾ, ಗಂಗಮ್ಮ ಬಿರಾದಾರ, ನಿಂಗಮ್ಮ ವಡಗೇರಿ, ಎಸ್.ಎಚ್.ಇನಾಮದಾರ ಸೇರಿದಂತೆ ಮತ್ತೀತರರು ಇದ್ದರು.

## ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್: ವಿಜಯಪುರ ಜಿಲ್ಲೆ ಕ್ರೀಡಾಪಟುಗಳ ಸಾಧನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮೈಸೂರಿನಲ್ಲಿ ಇತ್ತೀಚೆಗೆ ನಡೆದ 15ನೇ ರಾಜ್ಯ ಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಜಿಲ್ಲೆಯ ಕ್ರೀಡಾ ಶಾಲೆ-ನಿಲಯದ ಕ್ರೀಡಾಪಟುಗಳು 02 ಬಂಗಾರ, 03 ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಪಡೆದು ಸಾಧನೆಗೈದಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ ತಿಳಿಸಿದ್ದಾರೆ.

14 ವರ್ಷ ವಯೋಮಿತಿಯ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಕರಿಷ್ಮಾ ತಟಗಾರ ಬೆಳ್ಳಿ ಪದಕ, 16 ವರ್ಷ ವಯೋಮಿತಿಯ 15 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಜ್ಯೋತಿ ರಾಠೋಡ ಬಂಗಾರ ಪದಕ, ಕೋಕಿಲಾ ಬೆಳ್ಳಿ ಪದಕ ಹಾಗೂ ದೀಪಿಕಾ ಘಡತರೆ ಕಂಚಿನ ಪದಕ, 18 ವರ್ಷ ವಯೋಮಿತಿಯ 20 ಕಿ.ಮೀ. ವೈಯಕ್ತಿಕ ಟೈಮ್ ಟ್ರಾಯಲ್ಸ್‌ನಲ್ಲಿ ಶ್ರೀಶೈಲ ವೀರಾಪುರ ಬಂಗಾರ ಹಾಗೂ ಶ್ರೀನಿವಾಸ ರಜಪೂತ ಬೆಳ್ಳಿ ಪದಕ ಪಡೆದಿದ್ದಾರೆ.

ಮುಂಬರುವ 2024ರ ಡಿಸೆಂಬರ್ 4 ರಿಂದ 7ರಂದು ಓರಿಸ್ಸಾ ರಾಜ್ಯದ ಪುರಿಯಲ್ಲಿ ನಡೆಯುವ 29ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಸ್ಪರ್ಧೆಗೆ ರಾಜ್ಯ ತಂಡದಲ್ಲಿ ಕ್ರೀಡಾ ನಿಲಯದಿಂದ ಒಟ್ಟು 6 ಬಾಲಕರು, 5 ಬಾಲಕಿಯರು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು, ಇವರನ್ನು ಸನ್ಮಾನಿಸಿ ಅಭಿನಂದಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಸದಸ್ಯರ ಆಡಳಿತಾತ್ಮಕ ಅಹವಾಲು ಸ್ವೀಕಾರ ಸಭೆಗೆ ಚಾಲನೆ ನೀಡಿದ ಎಂಎಲ್ಸಿ ಸುನೀಲಗೌಡ ಪಾಟೀಲ ಭರವಸೆ

# ಪಂಚಾಯಿತಿ & ಸ್ಥಳೀಯ ಸಂಸ್ಥೆಗಳ ಸದಸ್ಯರ ಸಮಸ್ಯೆಗಳಿಗೆ ಧ್ವನಿಯಾಗುವೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರ ಸಮಸ್ಯೆಗಳನ್ನು ಆಲಿಸಿ ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಪರಿಹಾರ ಒದಗಿಸಲು ನಿಮ್ಮ ಧ್ವನಿಯಾಗಿ ಸರಕಾರದ ಗಮನ ಸೆಳೆಯುವುದಾಗಿ ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಬುಧವಾರ ನಗರದಲ್ಲಿ ನಡೆದ ವಿಜಯಪುರ ತಾಲೂಕಿನಲ್ಲಿ ಬರುವ ನಾಗಠಾಣ ಮತಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಆಡಳಿತಾತ್ಮಕ ಅಹವಾಲು ಸ್ವೀಕಾರ ಸಭೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಗೌರವಧನ ಕಡಿಮೆಯಿದ್ದು, ಈ ಸಮಸ್ಯೆಯ ಕುರಿತು ಹೋರಾಟ ನಡೆಸಿದ ಪರಿಣಾಮ ಗೌರವಧನವನ್ನು ಸ್ವಲ್ಪ ಹೆಚ್ಚಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಪಿಂಚಣಿ, ಉಚಿತ ಬಸ್ ಪಾಸ್ ಮತ್ತು ಟೋಲ್ ಗಳಲ್ಲಿ ಶುಲ್ಕದಿಂದ ವಿನಾಯಿತಿ ನೀಡಲು ಕೂಡ ಸರಕಾರದ ಗಮನ ಸೆಳೆಯುತ್ತೇನೆ. ಜಲಜೀವನ ಮಿಷನ್ ಯೋಜನೆಯಲ್ಲಿ ಗ್ರಾ. ಪಂ. ಪಾಲಿನ ವಂತಿಗೆಯನ್ನು ಸರಕಾರವೇ ಭರ್ತಿ ಮಾಡಬೇಕು ಎಂದು ಹೋರಾಟ ನಡೆಸಿದ್ದು ಫಲ ನೀಡಿದ್ದು, ಸರಕಾರ ಸ್ಪಂದಿಸಿದೆ. ಈ ವಂತಿಗೆ ಹಣವನ್ನು ಗ್ರಾ. ಪಂ. ಗಳು ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದಾಗಿದೆ ಎಂದು ಅವರು ಹೇಳಿದರು.

ಗ್ರಾ.ಪಂ. ಗಳಿಗೆ ನಾನಾ ವಸತಿ ಯೋಜನೆಗಳಡಿ ಮನೆ ಮಂಜೂರು ಮಾಡಿಸಲು ಹೋರಾಟ ಮಾಡಿದ ಪರಿಣಾಮ ಈಗ ಮನೆಗಳು ಲಭ್ಯವಾಗಿವೆ. ಈಗ ನಾನಾ ಗ್ರಾ. ಪಂ. ಗಳಲ್ಲಿ ನಾನಾ ಕಾರಣಗಳಿಂದ ಬ್ಲಾಕ್ ಆಗಿರುವ ಮನೆಗಳ ಮಾಹಿತಿ ನೀಡಿದರೆ ಸ್ಥಳೀಯ ಮತ್ತು ಸರಕಾರದ ಮಟ್ಟದಲ್ಲಿ ಗಮನ ಸೆಳೆದು ಪರಿಹರಿಸುತ್ತೇನೆ. ವಿಧಾನ ಪರಿಷತ ಶಾಸಕರಿಗೆ ಸಿಗುವ ಅನುದಾನ ಕಡಿಮೆಯಿದ್ದು, ಈ ಅನುದಾನವನ್ನು ವಿಜಯಪುರ ಮತ್ತು ಬಾಗಲಕೋಟೆ ಎರಡೂ ಜಿಲ್ಲೆಗಳ ಎಲ್ಲ 15 ವಿಧಾನ ಸಭೆ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ವರ್ಷದಲ್ಲಿ ಒಂದು ಬಾರಿ ವಿಧಾನ ಸಭೆ ಕ್ಷೇತ್ರವಾರ ಆಡಳಿತಾತ್ಮಕ ಅಹವಾಲು ಸ್ವೀಕಾರ ಸಭೆ ನಡೆಸಿ ಪರಿಹಾರ ಒದಗಿಸಲು ಪ್ರಯತ್ನಿಸುತ್ತಿದ್ದೇನೆ. ಹಲವು ಸಮಸ್ಯೆಗಳಿಗೆ ಆಯಾ ಕ್ಷೇತ್ರದ ಶಾಸಕರೊಂದಿಗೆ ಚರ್ಚಿಸಿ ಪರಿಹಾರ ಒದಗಿಸುತ್ತಿದ್ದೇನೆ. ಈ ಸಭೆಯ ಜೊತೆಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಭೆಯನ್ನೂ ನಡೆಸಿ ಅವರ ಅಹವಾಲನ್ನೂ ಕೂಡ ಆಲಿಸುತ್ತಿದ್ದೇನೆ. ಪಿಡಿಓಗಳ ಸಮಸ್ಯೆಗಳಿಗೂ ಸ್ಪಂದಿಸುವ ಕೆಲಸ ನಡೆದಿದೆ. ಒಟ್ಟಾರೆ ನಿಮ್ಮೆಲ್ಲರ ಧ್ವನಿಯಾಗಿ ಸರಕಾರದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.

ವಿಜಯಪುರ- ಬಾಗಲಕೋಟೆ- ಬೆಂಗಳೂರು ಹೊಸದಾಗಿ ವಂದೇ ಭಾರತ ರೈಲು ಮತ್ತು ಮುಂಬಯಿ- ಸೋಲಾಪುರ ವಂದೇ ಭಾರತ ರೈಲು ಸೇವೆ ಪ್ರಾರಂಭಿಸುವುದು ಕಾರ್ಯಸಾಧುವಲ್ಲ ಎಂದು ಕೇಂದ್ರ ರೇಲ್ವೆ ಇಲಾಖೆ ಸ್ಪಷ್ಟಪಡಿಸಿದೆ. ಈಗಲಾದರೂ ವಿಜಯಪುರ ಮತ್ತು ಬಾಗಲಕೋಟೆ ಸಂಸದರು ವಂದೇ ಭಾರತ ರೈಲು ಸೇವೆ ಪ್ರಾರಂಭಿಸಿದರೆ ಅವರಿಗೆ ಸಾರ್ವಜನಿಕರ ಪರವಾಗಿ ನಾಗರಿಕ ಸನ್ಮಾನ ಮಾಡುತ್ತೇನೆ ಎಂದು ಸುನೀಲಗೌಡ ಪಾಟೀಲ ಹೇಳಿದರು.

ವಿಜಯಪುರ ತಾ. ಪಂ. ಕಾರ್ಯ ನಿರ್ವಾಹಣಾಧಿಕಾರಿ ಬಾಬು ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕನ್ನೂರ ಗ್ರಾ. ಪಂ. ಸದಸ್ಯ ಎಂ. ಎಚ್ ಪಠಾಣ, ಐನಾಪುರ ಗ್ರಾ. ಪಂ. ಸದಸ್ಯೆ ಜಯಶ್ರೀ ಜಾಧವ ತಮ್ಮ ಅಭಿಪ್ರಾಯ ಹಂಚಿಕೊಂಡರು.

ತಾ.ಪಂ. ಸಹಾಯಕ ನಿರ್ದೇಶಕ ಬಾಬು ಉಮದಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಜಾಬಗೊಂಡ ನಿರೂಪಿಸಿದರು. ಪಿಡಿಓ ಎಸ್. ಆರ್. ಕಟ್ಟಿ ವಂದಿಸಿದರು.



### 8,640 ಕಿಲೋ ಮೀಟರ್ ಕಾಲ್ನಡಿಗೆಯ ಮಕ್ಕಾ ಪ್ರಯಾಣ | 3,300ಕಿ.ಮೀ ಕ್ರಮಿಸಿ ವಾಗ್ ಗಡಿ ಪ್ರವೇಶ | ನಿತ್ಯ 30 ಕಿ.ಮೀ ನಡಿಗೆ

# ಗಿರಿನಾಡಿನ ಸಯೇದ್ ಜಿಲ್ಲಾನಿ ಕಾಲ್ನಡಿಗೆಯ ಹಜ್ ಯಾತ್ರೆ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಇಲ್ಯಾಸ್ ಪಟೇಲ್. ಬಳಗಾನೂರ

ಯಾದಗಿರಿ: ನಮ್ಮಲ್ಲಿ ಜನರು ಅನೇಕ ಧರ್ಮಗಳನ್ನು (ಖಿಜಟುರುಔಟಿ) ಆಚರಣೆ ಮಾಡುತ್ತಿದ್ದರೂ ಸಹ ಆ ಧರ್ಮದಲ್ಲಿರುವ ನಂಬಿಕೆ ಮಾತ್ರ ಒಂದೇ ಅಂತ ಹೇಳಬಹುದು. ದೇವರಿಗೆ ಕಾಲ್ನಡಿಗೆಯಲ್ಲಿಹೋಗಿ ದೇವರಿಗೆ ಪೂಜೆ ಸಲ್ಲಿಸುವುದು ಬಹುತೇಕವಾಗಿ ಎಲ್ಲಾ ಧರ್ಮದವರು ಮಾಡುವಂತಹ ಒಂದು ಭಕ್ತಿಯ (ಆಜತಠಿಣುಔಟಿ) ಕೆಲಸ ಅಂತ ಹೇಳಿದರೆ ತಪ್ಪಾಗುವುದಿಲ್ಲ. ಜನರು ದಸರಾ ಹಬ್ಬಕ್ಕೆ ದೂರ ದೂರದ ದೇವಸ್ಥಾನಗಳಿಗೆ ತಾವು ಎಷ್ಟೋ ದಿನಗಳ ಕಾಲದವರೆಗೆ ಬಿಸಿಲು, ಮಳೆ ಮತ್ತು ಚಳಿ ಎನ್ನದೆ ಕಾಲ್ನಡಿಗೆಯಲ್ಲಿ ಹೋಗಿ ಪೂಜೆ ಸಲ್ಲಿಸಿ ಬರುವುದನ್ನು ನಾವು ನೋಡುತ್ತೇವೆ. ಮುಸ್ಲಿಂ (ಒಣಟುಟ) ಬಾಂಧವರು ಮೆಕ್ಕಾದಲ್ಲಿರುವ ಹಜ್ ಯಾತ್ರೆಗೆ ಹೋಗಲು ಇಡೀ ವಿಶ್ವದಾದ್ಯಂತದಿಂದ ಬರುವುದನ್ನು ನಾವು ನೋಡುತ್ತೇವೆ.

ಕೆಲವರು ವಿಮಾನದಲ್ಲಿ ಬಂದರೆ, ಕೆಲವರು ಬೇರೆ ಬೇರೆ ಸಾರಿಗೆ ವ್ಯವಸ್ಥೆಗಳ ಮೂಲಕ ಪವಿತ್ರ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಆದರೆ ಯಾದಗಿರಿ ಜಿಲ್ಲೆಯ 35 ವರ್ಷದ ವ್ಯಕ್ತಿಯು ಈ ಬಾರಿಯ ಹಜ್ 2025 ಯಾತ್ರೆಗೆ ನಡೆದುಕೊಂಡು ಹೋಗಲು ನಿರ್ಧರಿಸಿ 8,640 ಕಿಲೋ ಮೀಟರ್ ಕಾಲ್ನಡಿಗೆಯ ಮಕ್ಕಾ ಪ್ರಯಾಣವನ್ನು ಶುರು ಮಾಡಿದ್ದಾರೆ.



ಹಜ್ ಯಾತ್ರೆ ಮುಸ್ಲಿಮರಿಗೆ ಕಡ್ಡಾಯವಾಗಿರುದರಿಂದ. ಇಸ್ಲಾಂ ಧರ್ಮದಲ್ಲಿ ಜೀವನದಲ್ಲಿ ಒಮ್ಮೆಯಾದರೂ ಮೆಕ್ಕಾ, ಮದೀನಾಕ್ಕೆ ಹೋಗಿ ಹಜ್ ಕರ್ಮಗಳನ್ನು ಮುಗಿಸಬೇಕೆಂಬುದು ಪ್ರತಿಯೊಬ್ಬ ಮುಸಲ್ಮಾನ ವ್ಯಕ್ತಿಯ ಇಚ್ಛೆ. ಹಜ್ ಇಸ್ಲಾಂ ಧರ್ಮದ ಐದು ಆಚರಣೆಗಳ ಪೈಕಿ ಒಂದಾಗಿದೆ.

ಹೌದು, ಇದೀಗ ಕರ್ನಾಟಕದ ಗಿರಿನಾಡು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಹಳಿ ಸಗರ್ ಗ್ರಾಮದ ಸಯೇದ್ ಜಿಲ್ಲಾನಿ 35 ವರ್ಷದ ಯುವಕ ಹಜ್ ಯಾತ್ರೆಯನ್ನು ಕಾಲ್ನಡಿಗೆ ಮೂಲಕವೇ ಕೈಗೊಳ್ಳುವ ನಿರ್ಧಾರ ಮಾಡಿದ್ದು, ಈಗಾಗಲೇ ಕರ್ನಾಟಕದಿಂದ ಪ್ರಾರಂಭವಾಗಿ, ಮಹಾರಾಷ್ಟ್ರ, ಮಧ್ಯಪ್ರದೇಶ್, ರಾಜಸ್ತಾನ್, ಉತ್ತರ ಪ್ರದೇಶ, ಹರಿಯಾಣ, ದಿಲ್ಲಿ, ಪಂಜಾಬ್ ಹೀಗೆ ಹಲವು ರಾಜ್ಯಗಳ ಮೂಲಕ ವಾಗ್ ಗಡಿಗೆ ತಲುಪಿಪಿದ್ದಾರೆ. ಸೌದಿ ಅರೇಬಿಯಾದ ಪವಿತ್ರ ನಗರ ಮೆಕ್ಕಾಕ್ಕೆ ಕಾಲ್ನಡಿಗೆ ಮೂಲಕವೇ ಪ್ರಯಾಣ ಬೆಳೆಸಿಲ್ಲಿರುವ "ಸಯೇದ್ ಜಿಲ್ಲಾನಿ ಹಳಿ ಸಗರ್ " ರಾಜ್ಯ ಮುಸ್ಲಿಂ ಸಮುದಾಯದ ಪ್ರಶಂಸೆ ಗಳಿಸಿದ್ದಾರೆ.

ಈ ಸುದೀರ್ಘ ಪಯಣದಲ್ಲಿ ಅವರು ಹಲವು ದೇಶಗಳನ್ನು ಸುತ್ತಬೇಕಿದೆ. ಒಟ್ಟಾರೆ 2025ನೇ ಹಜ್ ಯಾತ್ರೆಯಲ್ಲಿ ತಮ್ಮ ಹಜ್ ಯಾತ್ರೆಮಾಡಿ ವಿಶಿಷ್ಟ ಸಾಧನೆ ಪೂರ್ಣಗೊಳಿಸುವ ಪ್ರತಿಜ್ಞ ಅವರದ್ದು. ಈ ವರ್ಷದ ಜೂನ್ 28ರಂದು ತಮ್ಮ ಸಹ ಗ್ರಾಮವಾದ ಶಹಾಪುರ ತಾಲೂಕಿನ ಹಳಿ ಸಗರ್ ಯಿಂದ ತಮ್ಮ ಅದ್ಭುತ ಪ್ರಯಾಣವನ್ನು ಪ್ರಾರಂಭಿಸಿದರು.

ಪ್ರತಿದಿನ, ಅವರು ಕನಿಷ್ಠ ಎಂದರೂ 30ಕಿಲೋ ಮೀಟರ್ ನಡೆಯುತ್ತಾರೆ ಅಂತ ಹೇಳಬಹುದು. ಭಾರತ, ಪಾಕಿಸ್ತಾನ, ಇರಾನ್, ಇರಾಕ್ ಮತ್ತು ಕುವೈತ್ ನಲ್ಲಿ ಸಂಚರಿಸಿದ ನಂತರ ಅವರು 2025ರಲ್ಲಿ ಹಜ್ ಯಾತ್ರೆಗಾಗಿ ಮೆಕ್ಕಾವನ್ನು ತಲುಪಲಿದ್ದಾರೆ. ಅಂತಿಮವಾಗಿ ಫೆಬ್ರವರಿ -ಮಾರ್ಚ್ 2025ರ ಆರಂಭದಲ್ಲಿ ಸೌದಿ ಅರೇಬಿಯಾವನ್ನು ತಲುಪಲಿದ್ದಾರೆ. ಸೌದಿ ಅರೇಬಿಯಾಕ್ಕೆ ಆಗಮಿಸಿದ ನಂತರ ಅವರು ಹಜ್ ಯಾತ್ರೆಗೆ ಅರ್ಜಿ ಸಲ್ಲಿಸಲ್ಲಿದ್ದಾರೆ.



## ನ್ಯೂಮೋನಿಯಾ ಭಯ ಬೇಡ, ಜಾಗ್ರತೆ ವಹಿಸಿ



ಕಲಬುರಗಿ: ವಿಪರಿತ ಜ್ವರ, ಚಳಿಯಾಗುವುದು, ಉಸಿರುಗಟ್ಟುವುದು, ಕೆಮ್ಮು, ಕಫದಲ್ಲಿ ರಕ್ತ, ಮೈ-ಕೈ ನೋವು, ಸುಸ್ತು, ವಾಕರಿಕೆ, ಸಂಧಿವಾತ, ಸ್ನಾಯು ಎಳೆತದಂತಹ ಲಕ್ಷಣಗಳು ನ್ಯೂಮೋನಿಯಾದಾಗಿವೆ. ಇವುಗಳು ಕಂಡುಬಂದರೆ ಭಯ ಪಡದೆ, ನಿರ್ಲಕ್ಷ್ಯ ಮಾಡದೆ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಆರೋಗ್ಯಯುತವಾಗಬೇಕು ಎಂದು ವೈದ್ಯಾಧಿಕಾರಿ ಡಾ.ಅನುಪಮಾ ಎಸ್.ಕೇಶ್ವಾರ ಹೇಳಿದರು.

ನಗರದ ಶೇಖರೋಜಾದ ಶಹಾಬಜಾರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ಸಹಯೋಗದೊಂದಿಗೆ ಜರುಗಿದ 'ವಿಶ್ವ ನ್ಯುಮೋನಿಯಾ ದಿನಾಚರಣೆ'ಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ನ್ಯೂಮೋನಿಯಾ ಜ್ವರ ಶ್ವಾಸಕೋಶಕ್ಕೆ ಸಂಬಂಧಿಸಿದ ಸಾಂಕ್ರಾಮಿಕ ಕಾಯಿಲೆಯಾಗಿರುತ್ತದೆ. ಇದು ಎಲ್ಲಾ ವಯೋಮಾನದವರಲ್ಲಿ ಕಂಡುಬರುತ್ತದೆ. ವಿಶೇಷವಾಗಿ ಮಕ್ಕಳಲ್ಲಿ ಮತ್ತು ವಯೋವೃದ್ಧರಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಿರುವುದುರಿಂದ ಹೆಚ್ಚು ಬಾಧಿಸುತ್ತದೆ. ಆಗ ಶ್ವಾಸಕೋಶದಲ್ಲಿ ಬ್ಯಾಕ್ಟರೀಯಾ, ವೈರಸ್, ಶಿಲಿಂಧ್ರ ಅಥವಾ ಇನ್ನಾವುದೇ ರೋಗಾಣುಗಳಿಂದ ಸೋಂಕು ತಗುಲಿ ನ್ಯೂಮೋನಿಯಾ ಉಂಟಾಗುತ್ತದೆ ಎಂದರು.

ನ್ಯೂಮೋನಿಯಾ ಖಾಯಿಲೆಯು ರೋಗಗ್ರಸ್ಥ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ, ಆತನು ಬಳಸಿದ ಬಟ್ಟೆ,ತಟ್ಟೆ, ಬಟ್ಟಲು, ಲೋಟ, ಚಮಚ, ಕರವಸ್ತ್ರ, ಟವೆಲ್, ಉಡುಪುಗಳನ್ನು ಬಳಸಿದಾಗ ಇತರರಿಗೆ ಹರಡುತ್ತದೆ. ನ್ಯೂಮೋನಿಯಾಕ್ಕೆ ಚಿಕಿತ್ಸೆಯ ಮೂಲಕ ನಿವಾರಿಸಿಕೊಳ್ಳಬಹುದಾಗಿದೆ. ಸ್ವಚ್ಛವಾಗಿ ಕೈತೊಳೆಯುವುದು, ರೋಗಿಗಳಿಂದ ದೂರವಿರುವುದು, ಆರಂಭಿಕ ಹಂತದಲ್ಲಿಯೇ ಖಾಯಿಲೆಯನ್ನು ಗುರ್ತಿಸಿ ಚಿಕಿತ್ಸೆ ಪಡೆಯುವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಉಪನ್ಯಾಸಕ ಹಾಗೂ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ರೇಶ್ಮಾ ನಕ್ಕುಂದಿ, ನಾಗೇಶ್ವರಿ ಮುಗಳಿವಾಡಿ, ಸಂಗಮ್ಮ ಅತನೂರ, ಗಂಗಾಜ್ಯೋತಿ ಗಂಜಿ, ಮಂಗಲಾ ಚಂದಾಪುರೆ, ಅರ್ಚನಾ ಸಿಂಗೆ, ಜಗನಾಥ ಗುತ್ತೇದಾರ, ಗುರುರಾಜ ಕೈನೂರ, ನಾಗಮ್ಮ ಚಿಂಚೋಳಿ ಸೇರಿದಂತೆ ಇನ್ನಿತರರು ಇದ್ದರು.

## ಯಾರೂ ಇಲ್ಲದವರಿಗೆ ದೇವರಿದ್ದಾನೆರವಿ ರಾಠೋಡ್



ವಾಡಿ: ಪಟ್ಟಣದ ಬಲರಾಮ ಚೌಕ್ ನಿವಾಸಿ ಜ್ಯೋತಿ ಸುನೀಲ್ ಎಂಬ ಗರ್ಭಿಣಿ ಮಹಿಳೆಯು ರಕ್ತಸ್ರಾವದಿಂದ ಗಾಬರಿಗೊಂಡು ಸಹಾಯಕ್ಕೆ ಮಹಿಳೆಯರನ್ನು ಕರೆದಿದ್ದಾರೆ. ಅದನ್ನು ಕಂಡು ಆಶಾ ಕಾರ್ಯಕರ್ತೆ ವಿಜುಬಾಯಿ ರಾಠೋಡ್ ಹಾಗೂ ಬಲರಾಮ ಚೌಕ್ ಅಂಗನವಾಡಿ ಸಹಾಯಕಿ ಲಕ್ಷ್ಮೀ ರವಿ ರಾಠೋಡ್ ಇಬ್ಬರೂ ಕೂಡಿ ಬಲರಾಮ ಚೌಕ್ ಹತ್ತಿರ ಇರುವ ವಾಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು, ವೈದ್ಯರಿಗೆ ತೋರಿಸುತ್ತಾರೆ. ಈ ಗರ್ಭಿಣಿಗೆ ಹೆಚ್ಚು ರಕ್ತ ಹೋಗಿತ್ತು ಬಿ ಪಿ ಕಡಿಮೆ ಇತ್ತು. ವೈದ್ಯರಾದ ಡಾ ಕಿರಣ್ ಹಾಗೂ ಪುಷ್ಪ ಅವರು ನಿಮ್ಮ ಹಿಂದೆ ಯಾರು ಇದ್ದಾರೆ ಎಂದು ಕೇಳಿದಾಗ ಸುನೀಲ್ ನನ್ನ ಹಿಂದೆ ಯಾರೂ ಇಲ್ಲ. ಇದ್ದರೂ ಬರುತ್ತಿಲ್ಲ ಎಂದು ಕಣ್ಣೀರು ಹಾಕುತ್ತಾರೆ. ಅದನ್ನು ಕಂಡು ಇಬ್ಬರು ವೈದ್ಯರು ಆ ಗರ್ಭಿಣಿಗೆ ಎರಡು ತಾಸು ಸೂಕ್ತಚಿಕಿತ್ಸೆ ನೀಡಿ ಅಪಾಯದಿಂದ ಪಾರು ಮಾಡಿ ತಮ್ಮ ಕರ್ತವ್ಯ ನಿಷ್ಠೆ ಮಾನವೀಯತೆ ತೋರಿಸಿದ್ದಾರೆ. ಅಲ್ಲದೆ ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ಕರೆ ಮಾಡಿ ಆದಷ್ಟು ಬೇಗ ಚಿಕಿತ್ಸೆ ನೀಡಿ ಎಂದು ವೈದ್ಯರಿಗೆ ಹೇಳಿದ್ದಾರೆ. ಡಾ ಕಿರಣ ಹಾಗು ಪುಷ್ಪ ಅವರು ಮಾಡುತ್ತಿರುವ ಸೇವೆ ಅಪಾರ ವಾಗಿದೆ. ಒಂದೆ ತಿಂಗಳಲ್ಲಿ ನಾಲ್ಕನೇ ಇಂತಹ ಘಟನೆ ನಡೆದಿದೆ

ಇಲ್ಲಿ ಸರಕಾರ ಖಾಲಿ ಇರುವ ಹುದ್ದೆ ತುಂಬಿದರೆ ಹೆಚ್ಚಿನ ಚಿಕಿತ್ಸೆ ನೀಡಲು ಅನುಕೂಲ ವಾಗುತ್ತದೆ ಎಂದು ಸಾರ್ವಜನಿಕರ ಅಭಿಪ್ರಾಯ.

## ವೀರತೆಗೆ ಓನಿಕೆ ಓಬವ್ವ ಆದರ್ಶ - ಅನಿಲ್ ಕುಮಾರ್



ಸಂಡೂರು: ವೀರವನಿತೆ ಒನಕೆ ಓಬವ್ವಳ ಸಾಹಸ, ದೇಶಪ್ರೇಮ ಪ್ರತಿಯೊಬ್ಬರಿಗೂ ಮಾದರಿ ಶೌರ್ಯಕ್ಕೆ ಅವರೇ ಆದರ್ಶ ಎಂದು ತಹಶೀಲ್ದಾರ್ ಅನಿಲ್ ಕುಮಾರ್ ಹೇಳಿದರು.

ತಹಶೀಲ್ದಾರ್ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ವೀರ ವನಿತೆ ಒನಕೆ ಓಬವ್ವ ಜಯಂತಿ ಕಾರ್ಯ್ಕಕ್ರಮ ಉದ್ಘಾಟಿಸಿ ಮಾತನಾಡಿ, ಓಬವ್ವ ಅವರ ಶೌರ್ಯದ ಮನೋಭಾವ ಧೈರ್ಯದ, ಗುಣ ಬೇಕು, ಅವರ ದೇಶಪ್ರೇಮ ಎಲ್ಲರಿಗೂ ಆದರ್ಶ ಎಂದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಷಡಾಕ್ಷರಯ್ಯ ಮಾತನಾಡಿ ಜಯಂತಿ ಹಾಗೂ ದಿನಾಚರಣೆ ಆಚರಿಸುವುದಿಲ್ಲ, ರಾಷ್ಟ್ರ ಪ್ರೇಮದ ಜಾಗೃತಿ, ತ್ಯಾಗ, ಬಲಿದಾನ ಸಾಧನೆಗಳು ಹಾಗೂ ನಿಸ್ವಾರ್ಥ ಸೇವೆ ಗುರುತಿಸಿ ಸರ್ಕಾರದ ನಿಯಮಗಳಡಿ ಜಯಂತಿಗಳನ್ನು ಆಚರಿಸಲಾಗುತ್ತಿದೆ ಎಂದರು. ಸರ್ಕಾರವು ಯಾವುದೇ ಜಾತಿ ಧರ್ಮಕ್ಕೆ ಸೀಮಿತಗೊಳಿಸಿ ಆಚರಿಸದೇ ಸರ್ವಜನಾಂಗದ, ದೇಶದ ಜನತೆಗೆ ಅದು ಆದರ್ಶವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪತ್ರಕರ್ತರು, ಗಣ್ಯರು, ಶಿವಕುಮಾರ್ ಶಿರಸ್ತೇದಾರ್, ಬೋವಿ ಸಿದ್ದೇಶ ಇತರರು ಉಪಸ್ಥಿತರಿದ್ದರು.

### 300 ಕೋಟಿಯಲ್ಲಿ 1200 ಕೋಟಿ ಅವ್ಯವಹಾರ ಅಸಾಧ್ಯ

## ತನಿಖಾದೇಶದ ವಿರುದ್ಧ ರಾಜ್ಯಪಾಲರಿಗೆ ಶೀಘ್ರ ಬಿಜೆಪಿ ದೂರು




ಕಲಬುರಗಿ: ಮಾಜಿ ಸಂಸದ ಡಾ. ಬಸವರಾಜ್ ಪಾಟೀಲ್ ಸೇಡಂ ಅವರ ಅಧ್ಯಕ್ಷತೆಯಲ್ಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಘಕ್ಕೆ ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ 300 ಕೋಟಿ ರೂ.ಗಳು ಬಿಡುಗಡೆಯಾಗಿದ್ದು, ಈಗ ಸಂಘದಲ್ಲಿ 1200 ಕೋಟಿ ರೂ.ಗಳ ಅವ್ಯವಹಾರವಾಗಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತನಿಖೆಗೆ ಆದೇಶ ಹೊರಡಿಸಿದ್ದು, ಈ ಕುರಿತು ಶೀಘ್ರ ಬಿಜೆಪಿಯ ನಿಯೋಗವು ರಾಜ್ಯಪಾಲರನ್ನು ಭೇಟಿ ಮಾಡಿ ದೂರು ಸಲ್ಲಿಸಲಿದೆ ಎಂದು ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೆಲ್ಕೂರ್ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರವು ಬಸವರಾಜ್ ಪಾಟೀಲ್ ಸೇಡಂ ಅವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದಶ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಘವನ್ನು ಸ್ಥಾಪಿಸಿತ್ತು. ಸಲಹಗಾರರಾಗಿ ಮದನಗೋಪಾಲ್ ಅವರು ಕಾರ್ಯನಿರ್ವಹಿಸಿದ್ದಾರ. ಸಂಘವು 300 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ರೂಪಿಸಿ ಸಚಿವ ಸಂಪುಟ ಅನುಮೋದನೆಯೊಂದಿಗೆ ಕಾರ್ಯನಿರ್ವಹಿಸಿದ್ದು ಜನರ ಮೆಚ್ಚುಗೆಗೂ ಕಾರಣವಾಗಿದೆ. ಬಿಡುಗಡೆಯಾದ 300 ಕೋಟಿ ರೂ.ಗಳಲ್ಲಿ 1200 ಕೋಟಿ ರೂ.ಗಳ ಅವ್ಯವಹಾರವಾಗಿದೆ ಎಂದು ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತನಿಖೆಗೆ ಆದೇಶಿಸಿದ್ದಾರೆ. ಅವರ ಆದೇಶದಲ್ಲಿ ಯಾರ ಪ್ರಭಾವ ಇದೆ ಎಂಬುದು ಗೊತ್ತಾಗಬೇಕು ಎಂದು ಒತ್ತಾಯಿಸಿದರು.

ಬಸವರಾಜ್ ಪಾಟೀಲ್ ಸೇಡಂ ಹಾಗೂ ಮದನಗೋಪಾಲ್ ಅವರ ಮೇಲೆ ಇಲ್ಲಿಯವರೆಗೂ ಒಂದು ಕಪ್ಪು ಚುಕ್ಕೆಯೂ ಸಹ ಇಲ್ಲ. ಆದಾಗ್ಯೂ, ಈಗ ಅವರ ಮೇಲೆ ಆಧಾರ ರಹಿತ ಆರೋಪಗಳನ್ನು ಮಾಡುತ್ತಿದೆ. ಕೂಡಲೇ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಬಸವರಾಜ್ ಪಾಟೀಲ್ ಸೇಡಂ ಅವರ ಕ್ಷಮೆ ಕೇಳಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಮತದಾರರ ಮನಸ್ಸನ್ನು ಬೇರೆಡೆ ಸೆಳೆಯಲು ರಾಜ್ಯ ಕಾಂಗ್ರೆಸ್ ಸರ್ಕಾರವು ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ನಡೆಯು ಖಂಡನೀಯ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.

ಸಂಘದಲ್ಲಿ ಹಿಂದಿನ ಸರ್ಕಾರ ಸಚಿವ ಸಂಪುಟವು 300 ಕೋಟಿ ರೂ.ಗಳನ್ನು ಮಾಡಿತ್ತು. ಕ್ರಿಯಾ ಯೋಜನೆಯನ್ನು ಅನುಮೋದನೆ ನೀಡಲಾಗಿದೆ. ಬಸವರಾಜ್ ಪಾಟೀಲ್ ಸೇಡಂ ಅವರು ಅಧ್ಯಕ್ಷರಾಗಿ, ಮದನಗೋಪಾಲ್ ಅವರು ಸಲಹೆಗಾರರು ಆಗಿದ್ದರು. ರಮಣರೆಡ್ಡಿ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ತನಿಖೆಗಾಗಿ ರಚಿಸಿತ್ತು. ಆ ಸಮಿತಿಯ ಅವ್ಯವಹಾರ ತನಿಖೆಯನ್ನು ಬಹಿರಂಗಗೊಳಿಸಿಲ್ಲ. ಹಾಗೂ ಆ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ ಆದಾಗ್ಯೂ, ನಿನ್ನೆ ತರಾತುರಿಯಲ್ಲಿ ಸಂಘದಲ್ಲಿ 1200ಕೋಟಿ ರೂ.ಗಳಿಗಿಂತ ಹೆಚ್ಚು ಅವ್ಯವಹಾರ ಆಗಿದೆ ಎಂದು ಆರ್ಥಿಕ ತಜ್ಞ ಸಿದ್ಧರಾಮಯ್ಯ ಅವರು ಮರು ತನಿಖೆಗೆ ಆದೇಶಿಸಿದ್ದಾರೆ. ಯಾರ ಒತ್ತಡಕ್ಕೆ ಮಣಿದು ಆದೇಶ ಹೊರಡಿಸುವ ಮೂಲಕ ಮತದಾರರಲ್ಲಿ ಪ್ರಭಾವ ಬೀರುವ ದುರುದ್ದೇಶ ಹೊಂದಲಾಗಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಈಗ ಕರ್ನಾಟಕದಲ್ಲಿ ಮೂರು ವಿಧಾನಸಭಾ ಮತಕ್ಷೇತ್ರಗಳಿಗೆ ಉಪ ಚುನಾವಣೆ ಜರುಗಲಿದೆ. ಇಂತಹ ಸಂದರ್ಭದಲ್ಲಿ ಮರು ತನಿಖೆಯ ಆದೇಶದ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗುವುದು ಎಂದು ಹೇಳಿದ ಅವರು, ಅವ್ಯವಹಾರವು 1200 ಕೋಟಿ ರೂ.ಗಳಾಗಿದೆ ಎಂದು ರಾಜ್ಯ ಸರ್ಕಾರವೇ ದೂರುತ್ತಿದ್ದು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು 2013ರಿಂದ ಪ್ರಾರಂಭಗೊಂಡಿದ್ದು, 2023ರವರೆಗಿನ ಅಕ್ರಮ ಕುರಿತು ತನಿಖೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಈ ಕುರಿತು ಇಡಿ ಇಲ್ಲವೇ ಸಿಬಿಐ ತನಿಖೆಗೆ ಒಪ್ಪಿಸಬೇಕು. ಈ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷರೊಂದಿಗೆ ಮಾತನಾಡಿ, ರಾಜ್ಯಪಾಲರ ಬಳಿಗೆ ನಿಯೋಗ ಹೋಗಿ ಮನವಿ ಮಾಡಲಾಗುವುದು ಎಂದು ತೆಲ್ಕೂರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ನಗರ ಜಿಲ್ಲಾಧ್ಯಕ್ಷ ಚಂದು ಪಾಟೀಲ್, ಗ್ರಾಮೀಣ ಕ್ಷೇತ್ರದ ಶಾಸಕ ಬಸವರಾಜ್ ಮತ್ತಿಮೂಡ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ನಿತಿನ್ ಗುತ್ತೇದಾರ್, ಸಂತೋಷ್ ಹಾದಿಮನಿ, ಶೇಖರರೆಡ್ಡಿ ನಾಲವಾರ್ ಮುಂತಾದವರು ಉಪಸ್ಥಿತರಿದ್ದರು.

## ಕಠಿಣ ಪರಿಶ್ರಮವಿದ್ದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ:ಬಿ.ಫೌಜಿಯಾ ತರನ್ನುಮ್



ಕಲಬುರಗಿ: ಕಠಿಣ ಪರಿಶ್ರಮದಿಂದ ಮುಂದೆ ಸಾಗಿದಲ್ಲಿ ಜೀವನದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ. ಐ.ಎ.ಎಸ್-ಐ.ಪಿ.ಎಸ್. ಅಧಿಕಾರಿಯಾದರೇ ಸಾಧನೆ ಎನ್ನಲ್ಲ. ಬದಲಾಗಿ ನಿಮ್ಮಿಷ್ಟದ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಿದಲ್ಲಿ ಅದು ಸಹ ಸಾಧನೆಯಾಗುತ್ತದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಹೇಳಿದರು.

ಮಂಗಳವಾರ ಚಿತ್ತಾಪುರ ತಾಲೂಕಿನ ಮಾಡಬೂಳ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ "ಸ್ಪೂರ್ತಿಯ ಕಿರಣ" ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಿಮ್ಮಂತೆ ಸರಳ ಮತ್ತು ಮಧ್ಯಮ ಕುಟುಂಬದಿಂದ ಬಂದಿರುವೆ. ನಮ್ಮನೆಯಲ್ಲಿ ಯಾರು ಸರ್ಕಾರಿ ನೌಕರಿಯಲ್ಲಿರಲಿಲ್ಲ. ಕಷ್ಟು ಪಟ್ಟು ಓದಿದ ಪರಿಣಾಮ ಐ.ಎ.ಎಸ್ ಅಧಿಕಾರಿಯಾಗಿರುವೆ ಎಂದು ತಮ್ಮ ಬದುಕಿನ ಪುಟ ತೆರೆದಿಟ್ಟ ಅವರು, ನೀವು ಸಹ ಛಲ, ಕಷ್ಟಪಟ್ಟು ಅಭ್ಯಾಸ ಮಾಡಿದಲ್ಲಿ ಯಶ ಸಾಧ್ಯ ಎಂದು ಮಕ್ಕಳನ್ನು ಉದ್ದೇಶಿಸಿ ಸ್ಪೂರ್ತಿಯ ಮಾತುಗಳನ್ನಾಡಿದರು.

ಪರೀಕ್ಷೆಗೆ ಹೆದರಬೇಡಿ:

ವಿದ್ಯಾರ್ಥಿಗಳು ಪರೀಕ್ಷೆ ಸಮೀಪಿಸುತ್ತಿದ್ದಂತೆ ಹೆದರುವ ಮನಸ್ಥಿತಿ ಬಿಡಬೇಕು. ಪರೀಕ್ಷೆಯನ್ನು ಖುಷಿಯಿಂದ ಬರೆಯಬೇಕು. ಪ್ರತಿ ವಿದ್ಯಾರ್ಥಿಯ ವ್ಯಕ್ತಿತ್ವ ಬೇರೆಯಾಗಿರುತ್ತದೆ. ಹೀಗಾಗಿ ಇತರೆ ವಿದ್ಯಾರ್ಥಿಯನ್ನು ನಕಲು ಮಾಡದೆ ತಮ್ಮಿಷ್ಟದ ದಾರಿಯಲ್ಲಿ ಗುರಿಯೆಡೆಗೆ ಸಾಗಬೇಕು ಎಂದು ಡಿ.ಡಿ.ಪಿ.ಯು ಶಿವಶರಣಪ್ಪ ಮೂಳೆಗಾಂವ ಮಕ್ಕಳೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ ಆನಂದಶೀಲ ಕೆ., ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಪ್ರಭಾವತಿ ಪಾಟೀಲ, ಉಪ ಪ್ರಾಂಶುಪಾಲರು, ಪ್ರೌಢ ಮತ್ತು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಸೇರಿದಂತೆ ಪ್ರೌಢ ಮತ್ತು ಪದವಿ ಪೂರ್ವ ಕಾಲೇಜಿನ ಸುಮಾರು 500 ಮಕ್ಕಳು ಇದ್ದರು. ಇದೇ ಸಂದರ್ಭದಲ್ಲಿ ಮಧ್ಯಾಹ್ನದ ಬಿಸಿಯೂಟ ಗುಣಮಟ್ಟ ಪರಿಶೀಲಿಸಿದ ಡಿ.ಸಿ. ಅವರು ಮಕ್ಕಳೊಂದಿಗೆ ಗ್ರೂಪ್ ಫೋಟೋಗೆ ಪೋಸ್ ನೀಡಿದರು.

## ಎಷ್ಟೆ ಸವಾಲುಗಳು ಬಂದರು ಜೀವನದಲ್ಲಿ ಗುರಿ ಸಾಧಿಸಬೇಕು: ಜಿಲ್ಲಾಧಿಕಾರಿ



ಕಲಬುರಗಿ: ಕೇವಲ ಸರ್ಕಾರಿ ನೌಕರರಿಗೆ ಸೇವೆಸಲ್ಲಿಸಬೇಕೆಂದು ಎನೆಲ್ಲ ಸಮಾಜ ಸೇವೆ ಮಾಡಲು ಹಲವಾರು ಕ್ಷೇತ್ರಗಳಿವೆ ನಿಮ್ಮ ಜೀವನದಲ್ಲಿ ಎಷ್ಟೇ ಕಷ್ಟ ಬಂದರು ಎಷ್ಟೇ ಸವಾಲುಗಳು ಬಂದರು ನಿಮ್ಮ ಗುರಿ ಕಡೆ ಮುನ್ನುಗ್ಗುತ್ತಿರಿ ಗುರಿ ಇದ್ದ ಮೇಲೆ ಸಾದಿಸುತ್ತೇನೆ ಎಂಬ ಹಠ ಹುಚ್ಚತನವಿರಬೇಕು ಎಂದು ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ಅವರು ಹೇಳಿದರು.

ಮಂಗಳವಾರದಂದು ಕಲಬುರಗಿ ನಗರದ ಎಂ ಬಿ ನಗರ ಪ್ರದೇಶದ ಈಶಾನ್ಯ ಭವನದಲ್ಲಿ ನೌಕರರ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಕಾರ್ಯಾಗಾರವನ್ನು ದೀಪ ಹಚ್ಚವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಸೇವೆ ಮಾಡಬೇಕೆಂದರೆ ಅನೇಕ ಕ್ಷೇತ್ರಗಳಿವೆ ತಂತ್ರಜ್ಞಾನ ಇಂಟರ್‌ನೆಟ್ ಎಂಬುವುದು ಈಗಿನ ಯುವಕರಿಗೆ ಅದ್ಬುತವಾದ ಶಕ್ತಿಯಾಗಿದೆ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂದು ಗೊತ್ತಿದ್ದರೆ ಜೀವನದಲ್ಲಿ ಏನೋ ಬೇಕಾದರು ಸಾಧಿಸಬಹುದಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಶರಣಪ್ಪ ಎಸ್ ಡಿ ಅರ್ಥ ಪೂರ್ಣವಾದ ಕಾರ್ಯಾಗಾರವಾಗಿದೆ ನಮಗೆ ಈ ತರಹದ ಅವಕಾಶ ನಮಗೆ ಇರಲಿಲ್ಲ ಈ ಕಾರ್ಯಾಗಾರದ ಸದುಉಪಯೋಗ ಪಡೆದುಕೊಳ್ಳಬೇಕೆಂದು ಎಂದರು.

ಶಿಸ್ತು ನಿರ್ಧಾರ ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ವಿಯಾಗಬಹುದಾಗಿದೆ. ನಿಮ್ಮ ಭವಿಷ್ಯ ನೀವು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅಡಗಿರುತ್ತದೆ ಎಂದರು.

ನೀವುನಿಮ್ಮಜೀವನದನಿರ್ಧಾರಮಾಡಲಿಲ್ಲ ಅಂದರೆ ನಿಮ್ಮ ಜೀವನ ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ ಸಮಯ ವ್ಯರ್ಥ ಮಾಡಬೇಡಿ ನಿಮ್ಮ ತಂದೆ ತಾಯಿ ನಿಮ್ಮ ಮೇಲೆ ಆಸೆ ನಿರೀಕ್ಷೆಗಳನ್ನು ಇಟ್ಟುಗೊಂಡಿದ್ದಾರೆ ಪ್ರತಿಯೊಬ್ಬರು ಜೀವನದಲ್ಲಿ ಇಟ್ಟುಗೊಂಡಿರುವ ಗುರಿಯನ್ನು ಸಾಧಿಸಿ ತಂದೆ, ತಾಯಿ ಹೆಮ್ಮೆಪಡುವಂತ ಕೆಲಸಮಾಡಿ ಕಷ್ಟಪಟ್ಟು ಕೆಲಸ ಮಾಡಿದಲ್ಲಿ ಯಶಸ್ಸು ಎಂಬುವುದು ನಿಮ್ಮ ಮನೆ ಬಾಗಿಲಿಗೆ ಬರುತ್ತದೆ. ಮತ್ತು ಮುಂದೆ ವಯಸ್ಸದ ತಂದೆ ತಾಯಿಗಳನ್ನ ಚೆನ್ನಾಗಿ ನೋಡಿಕೊಳ್ಳಿ ಕೀವಿ ಮಾತು ಹೇಳಿದರು.

ಶಿಕ್ಷಣ ಇಲಾಖೆ ಅಪರ ಆಯುಕ್ತ ಆಕಾಶ್ ಎಸ್ ಮಾತನಾಡಿ,ನಿಮ್ಮ ತಂದೆ ತಾಯಿಗಳು ಕಷ್ಟುಪಟ್ಟು ನಿಮ್ಮ ಬೆಳೆಸಿರುತ್ತಾರೆ ಅವರಿಗೆ ಗೌರವತರುವಂತಹ ಕೆಲಸಮಾಡಬೇಕು. ಭಾರತ ದೇಶದಲ್ಲಿ ಅತ್ಯುನತ್ತ ಪ್ರಶಸ್ತಿ ಎಂಬುವುದು ಭಾರತ ರತ್ನವಾಗಿದ್ದು ಇಲ್ಲಿಯವರಿಗೂ ಯಾವುದೇ ಐ ಎ ಎಸ್ ಅಧಿಕಾರಿಗಳಿಗೆ ಭಾರತ್ನ ರತ್ನ ನೀಡಿಲ್ಲ ಭಾರತ ರತ್ನ ಸಿಗಬೇಕಾದರೆ ಯಾವುದೇ ರಂಗದಲ್ಲಿ ಸಾಧನೆ ಮಾಡಿದವರಿಗೆ ನೀಡುತ್ತಾರೆ ಹಾಗಾಗಿ ಸಾಧನೆ ಎಂಬುವುದು ಯಾವುದೇ ಕ್ಷೇತ್ರದಲ್ಲಿ ಮಾಡಬಹುದಾಗಿದೆ ಎಂದರು.

ಗುಲಬರ್ಗಾ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ನಿರ್ದೇಶಕ ಡಾ.ಸಂಗಮೇಶ ಹಿರೆಮಠ ಬುದ್ಧ ಅಂಬೇಡ್ಕರ ಗಾಂಧೀಜಿ ತರಹ ಸಾಧಕರಾಗಬೇಕು ನಮ್ಮ ನೆಲ 12ನೇ ಶತಮಾನದಲ್ಲಿ ಕ್ರಾಂತಿ ಮಾಡಿದ ನೆಲವಾಗಿದೆ. ಅವಾಗಿನ ಕಾಲದಲ್ಲಿ ಜಗತ್ತಿ ಡೆಮೋಕ್ರಸಿ ನೀಡಿದ ನಾಡಾಗಿದೆ. 12 ನೇ ಶತಮಾನದಲ್ಲಿಯೇ ಸಾವಿರಾರು ವಚನಗಳನ್ನ ನೀಡಿರುವ ನಾಡಗಿದೆ ಮತ್ತು ಏನಾದರು ಆಗು ಮೊದಲು ಮಾನವ ಆಗಬೇಕು ಎಂದು ಹೇಳಿದರು.

ಇದೆಸಂದರ್ಭದಲ್ಲಿಐ.ಎ.ಎಸ್.ಪ್ರಿಲಿಮನರಿ ಪಾಸ ಮಾಡಿದ ಮಂಜುನಾಥ ತಂದೆ ಜಟ್ಟಪ್ಪ ಹಾಗೂ ಅಂಬಿಕಾ ತಂದೆ ವೆಂಕಟೇಶ ಎವಬ್ಲ್ಯೂ ನಲ್ಲಿ 6 ಚಿನ್ನದ ಪದಕ ಗೆದ್ದಿದರಿಂದ ಸನ್ಮಾನಿಸಲಾಯಿತು ಎಸ್.ಎಸ್.ಎಲ್,ಸಿ ಮತ್ತು ಪಿಯುಸಿ ಮತ್ತು ಪದವಿ ವ್ಯಾಸಂಗದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಆಕಾಶ ಎಸ್ ಅವರಿಂದ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಇಲಾಖೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ ರಾಚಪ್ಪ ಕಾರ್ಯಕ್ರಮವನ್ನ ಸ್ವಾಗತಿಸಿದರು ಪ್ರಸ್ತಾವಿಕ ನುಡಿಗಳನ್ನ ಆಡಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಅರ್ಥಿಕ ಸಲಹೆಗಾರರು ಶ್ರೀದೇವಿ. ಮುಖ್ಯ ಸಂಚಾರ ವ್ಯವಸ್ಥಾಪಕರು ಸಂತೋಷ ಕುಮಾರ.ಮತ್ತು ಮುಖ್ಯ ಭದ್ರತಾ ಮತ್ತು ಜಾಗೃತಿಧಿಕಾರಿ ಆನಂದ ಬಂದ್ರಕಳ್ಳಿ.ಸಿಬ್ಬಂದಿಗಳುವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಹೆಣದ ಮೇಲೆ ಹಣ ಮಾಡಿದ್ದೇ ಬಿಜೆಪಿ ಸಾಧನೆ: ಶರಣಪ್ರಕಾಶ್-ಅಜಯಸಿಂಗ್ ಟೀಕೆ



ಕಲಬುರಗಿ: ಕೋವಿಡ್ ಅವಧಿಯಲ್ಲಿ ಜನರ ಜೀವ ಉಳಿಸುವ ಪ್ರಾಮಾಣಿಕ ಯತ್ನ ಮಾಡುವ ಬದಲು ಹೆಣದ ಮೇಲೆ ಹಣ ಮಾಡುವ ಕೆಲಸ ಮಾಡಿದ್ದೇ ಬಿಜೆಪಿ ಸಾಧನೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹಾಗೂ ಕೆ.ಕೆ. ಆರ್.ಡಿ.ಬಿ ಅಧ್ಯಕ್ಷ ಡಾಅಜಯಸಿಂಗ್ ಟೀಕಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೊರೊನಾ ಕಾಲದಲ್ಲಿ ಅಕ್ರಮ ಆಗಿರುವುದು ನಿಜ ಎಂದು ನ್ಯಾಯಮೂರ್ತಿ ಮೈಕಲ್ ಡಿ.ಕುನ್ಹಾ ಆಯೋಗ ವರದಿ ಸ್ಪಷ್ಟಪಡಿಸಿದೆ. ಅದರಲ್ಲೂ

ಮಾರುಕಟ್ಟೆ ದರಕ್ಕಿಂತ ಹೆಚ್ಚು ದರ ವಿಧಿಸಿ ಖರೀದಿ ಮಾಡಿದ್ದಾರೆ ಎಂಬುದು ಸಾಬೀತಾಗಿದೆ ಎಂದರು.

ಬಿಜೆಪಿ ನಾಯಕರು ಹೆಣದ ಮೇಲೆ ಹಣ ಮಾಡುವುದರಲ್ಲಿ ನಿಸ್ಸೀಮರು. ಹಾಗಾಗಿ, ರೂ. 49 ಕೋಟಿ ಅಕ್ರಮದ ಹಣವನ್ನು ವಸೂಲು ಮಾಡಲು ಕುನ್ಹಾ ಸಮಿತಿ ವರದಿ ಶಿಫಾರಸು ಮಾಡಿದೆ ಎಂದು ನುಡಿದರು.

ಇದೇರೀತಿ, ವೈದ್ಯಕೀಯ ಶಿಕ್ಷಣ, ಆರೋಗ್ಯ ಇಲಾಖೆಗಳಲ್ಲೂ ಭಾರಿ ಮೊತ್ತದ ಭ್ರಷ್ಟಾಚಾರ ನಡೆದಿದೆ. ಪಿಪಿಇ ಕಿಟ್, ಸಿಟಿ ಸ್ಕ್ಯಾನ್, ವೆಂಟಿಲೇಟರ್ ಖರೀದಿಯಲ್ಲಿ ಅವ್ಯವಹಾರವಾಗಿದೆ. ಹಾಗಾಗಿ, ಇಲಾಖೆಯ ಹಿಂದಿನ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕಿದ್ವಾಯಿ ಅಸ್ಪತ್ರೆಯ ಆರ್. ಟಿ.ಪಿ.ಸಿ.ಆರ್ ಟೆಸ್ಟಿಂಗ್ ಲ್ಯಾಬಿನಲ್ಲಿಯೂ ರೂ. 200 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದೆ ನ್ಯಾ.ಕುನ್ಹಾ ಆಯೋಗದ ವರದಿ ಹೇಳಿದೆ. ಇದು ಏನಿದ್ದರೂ ಕೇವಲ ಮಧ್ಯಂತರ ವರದಿಯಷ್ಟೇ. ಅಂತಿಮ ವರದಿಯಲ್ಲಿ ಇನ್ನೂ ಬಹಳಷ್ಟು ಭ್ರಷ್ಟಾಚಾರ ಬಯಲಾಗಲಿದೆ ಎಂದು ಹೇಳಿದರು.

ನ್ಯಾ. ಕುನ್ಹಾ ಕೈ ಏಜೆಂಟ್ ರೀತಿಯಲ್ಲಿ ವರದಿ ನೀಡಿದ್ದಾರೆ ಎಂಬ ಸಚಿವ ಪ್ರಹ್ಲಾದ ಜೋಶಿ ಆರೋಪಕ್ಕೆ ತಿರುಗೇಟು ನೀಡಿದ ಅವರು, ಓರ್ವ ಕೇಂದ್ರ ಮಂತ್ರಿಯಾಗಿ ಈ ರೀತಿ ಹೇಳಿಕೆ ನೀಡೋದು ಎಷ್ಟು ಸರಿ? ಎಂದು ಸಚಿವ ಶರಣಪ್ರಕಾಶ್ ಪ್ರಶ್ನಿಸಿದರು.

ಬಿಜೆಪಿಯದ್ದು ವಿಭಜನೆ ರಾಜಕಾರಣ ಎಂದರಲ್ಲದೆ,

ಬಿಜೆಪಿ ನಾಯಕರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಖುದ್ದು ಪ್ರಧಾನಿಯೇ ಗ್ಯಾರಂಟಿ ಅನುಷ್ಠಾನ ಮಾಡೋಕೆ ಆಗಲ್ಲ ಎಂದಿದ್ದರು. ಆದರೆ ಈಗ ಮಹಾರಾಷ್ಟ್ರದಲ್ಲಿ ನಮ್ಮದೇ ಗ್ಯಾರಂಟಿ ಯೋಜನೆಗಳನ್ನು ಕಾಪಿ ಮಾಡುತ್ತಿದ್ದಾರೆ ಎಂದು ಉಭಯ ನಾಯಕರು ಲೇವಡಿ ಮಾಡಿದರು.

ಪ್ರಧಾನಿ ಮೋದಿಗೆ ಹಣಕಾಸು ಜ್ಞಾನ ಇಲ್ಲ

ಗ್ಯಾರಂಟಿ ಯೋಜನೆಗಳಿಂದಾಗಿ ಕರ್ನಾಟಕ ರಾಜ್ಯ ದಿವಾಳಿಯಾಗಿದೆ ಎಂದು

ಪ್ರಧಾನಿ ನರೇಂದ್ರ ಮೋದಿ ಸುಮ್ ಸುಮ್ನೆ ಭಾಷಣ ಮಾಡುತ್ತಾರೆ. ಅವರಿಗೆ ನಯಾಪೈಸೆಯಷ್ಟೂ ಹಣಕಾಸಿನ ಜ್ಞಾನ ಇಲ್ಲ ಎಂದು ಸಚಿವ ಶರಣ ಪ್ರಕಾಶ್ ಹಾಗೂ ಕೆ.ಕೆ.ಆರ್.ಡಿ.ಬಿ ಅಧ್ಯಕ್ಷ ಅಜಯಸಿಂಗ್ ಲೇವಡಿ ಮಾಡಿದರು.

ಎಲ್ಲಿ ದಿವಾಳಿಯಾಗಿದೆ ಎಂಬುದನ್ನು ತೋರಿಸಲಿ ನೋಡೋಣ ಎಂದು ಸವಾಲು ಹಾಕಿದರು.

ಬಿಎಸ್ ವೈ ಜೊತೆ ಕೈ ಜೋಡಿಸಿದ್ದೆ ನಮ್ಮ ಸರ್ಕಾರ ಕೆಡುವೋದಕ್ಕೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ಶರಣಪ್ರಕಾಶ್,

"ನಾವೇನು ಬಿಟ್ಟಿ ಬಂದಿದ್ದೀವಾ?

ಜನ ನಮ್ಮನ್ನ ಆಯ್ಕೆ ಮಾಡಿ ಕಳಿಸಿದ್ದಾರೆ. ಸರ್ಕಾರ ಕೆಡವೋದು ಅಂದ್ರೆ ಎಂಎಲ್ ಎಗಳನ್ನ ಖರೀದಿ ಮಾಡ್ತಾರಾ?

ದೇವೇಗೌಡರು ಬಹಳ ಹಿರಿಯರು. ಅವರ ಬಗ್ಗೆ ನಾನು ಜಾಸ್ತಿ ಮಾತನಾಡೋಲ್ಲ" ಎಂದು ಸೂಕ್ಷ್ಮವಾಗಿ ತಿವಿದರು.


ಪ್ರಧಾನಿ ಬಾಯಿಂದ ಸುಳ್ಳು

ಕರ್ನಾಟಕದ ಅಬಕಾರಿ ಇಲಾಖೆಯಿಂದ ರೂ.700 ಕೋಟಿ ವಸೂಲಿ ಮಾಡಿ ಆ ಹಣವನ್ನು ಮಹಾರಾಷ್ಟ್ರ ಚುನಾವಣೆಗೆ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸುಳ್ಳು ಹೇಳಿದ್ದಾರೆ ಎಂದು ಶರಣಪ್ರಕಾಶ್ ಹಾಗೂ ಅಜಯಸಿಂಗ್ ವಾಗ್ದಾಳಿ ನಡೆಸಿದರು.

ಪ್ರಧಾನಿಯಾಗಿ ನರೇಂದ್ರ ಮೋದಿಯವರು ಸುಳ್ಳು ಹೇಳುತ್ತಿದ್ದಾರೆ. ಇಷ್ಟಕ್ಕೂ

ರಾಜ್ಯದ ಬಿಜೆಪಿ ನಾಯಕರು ಪ್ರಧಾನಿ ಬಾಯಿಂದ ಸುಳ್ಳು ಹೇಳಿಸುತ್ತಿದ್ದಾರೆ ಎಂದು ದಿಗ್ಭ್ರಮೆ ವ್ಯಕ್ತಪಡಿಸಿದರು.

# ಇತಿಹಾಸದಲ್ಲಿ ಅಮರ ವೀರವನಿತೆ ಒನಕೆ ಓಬವ್ವ:ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ್



ಯಾದಗಿರಿ : ವೀರವನಿತೆ ಒನಕೆ ಓಬವ್ವ ಅವರು ಸ್ವಾಮಿನಿಷ್ಠೆ ಹಾಗೂ ಸಮಯಪ್ರಜ್ಞೆ ಮೂಲಕ ಚಿತ್ರದುರ್ಗದ ಕೋಟೆ ರಕ್ಷಣೆಗೆ ತೋರಿದ ಧೈರ್ಯ-ಸಾಹಸ ಸ್ಮರಣೀಯವಾಗಿದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ "ಒನಕೆ ಓಬವ್ವ ಜಯಂತಿ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಗೃಹಿಣಿ ಎನಿಸಿಕೊಂಡಿದ್ದ ಒನಕೆ ಓಬವ್ವ, ಇತಿಹಾಸದ ಪುಟಗಳಲ್ಲಿ ಆವರಿಸಿಕೊಂಡಿದ್ದೆ ರೋಮಾಂಚಕ ಕಥನ. ಚಲವಾದಿ ಸಮುದಾಯದ ಓಬವ್ವ, ಸ್ವಾಮಿ ನಿಷ್ಠೆ, ಸಮಯ ಸ್ಫೂರ್ತಿ ಮತ್ತು ತ್ಯಾಗದ ತ್ರಿವೇಣಿ ಸಂಗಮ. ಚಿತ್ರದುರ್ಗದ ಕೋಟೆಯ ಮುತ್ತಿಗೆಗೆ ಯತ್ನಿಸಿದ ಹೈದರ್-ಅಲಿ ಕುತಂತ್ರವನ್ನು ವಿಫಲಗೊಳಿಸಿ ಕೋಟೆ ಮತ್ತು ಜನತೆಯನ್ನು ಅಪಾಯದಿಂದ ಪಾರು ಮಾಡಿದ ವೀರವನಿತೆ ಓಬವ್ವ ಎಂದು ಹೇಳಿದರು.

ಒನಕೆ ಓಬವ್ವ 18ನೇ ಶತಮಾನದ ಚಿತ್ರದುರ್ಗ ಕೋಟೆಯ ಪಾಳೆಗಾರನಾಗಿದ್ದ ಮದಕರಿ ನಾಯಕನ ಕೋಟೆಯ ಕಾವಲುಗಾರ ಮದ್ದ ಹನುಮಪ್ಪನ ಹೆಂಡತಿ. ಇವರನ್ನು ಕನ್ನಡ ನಾಡಿನ ವೀರ ವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಸಾಲಿನಲ್ಲಿ ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ವಿಶೇಷ ಉಪನ್ಯಾಸಕರಾಗಿ ಮಾತನಾಡಿದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ನಿವೃತ್ತ ಪ್ರಾಂಶುಪಾಲರಾದ ಸರ್ವೋದಯ ಎಸ್.ಎಸ್ಅವರು, ಗುಡಕೋಟೆ ಪಾಳೆಗಾರರಲ್ಲಿ ಕಹಳೆಯವರಾಗಿ ಸೇವೆ ಸಲ್ಲಿಸುತ್ತಿದ್ದ ಚಿನ್ನಪ್ಪ, ಚಿನ್ನಮ್ಮ ದಂಪತಿಯ ಸುಪುತ್ರಿಯಾಗಿ ಬಳ್ಳಾರಿ ಜಿಲ್ಲೆಯ ಕೊಡ್ಲಿಗಿ ತಾಲೂಕಿನ ಗುಡ್ಡೆ ಕೋಟೆಯಲ್ಲಿ ಜನಿಸಿದಳು. ಓಬವ್ವಗೆ ಕಂದೂರಪ್ಪ ಮತ್ತು ತಿಪ್ಪಣ್ಣ ಎಂಬ ಅಣ್ಣಂದಿರು ಕಂದೂರಪ್ಪ ನಿಡುಗಲ್ಲು ಸಂಸ್ಥಾನದ ದೊರೆಗಳಲ್ಲಿ ಕಾವಲಗಾರನಾಗಿ ಶತ್ರುಗಳನ್ನು ಏಕಾಂಗಿಯಾಗಿ ಎದುರಿಸಿ ವೀರಮರಣ ಹೊಂದಿದ್ದರು. ಇಂತಹ ಆದರ್ಶ ಕುಟುಂಬದಲ್ಲಿ ಬೆಳೆದವಳು ಒಬ್ಬವ್ವಳ ಪತಿ ಕಹಳೆ ಮದ್ದ ಹನುಮಪ್ಪ ಕಿಂಚಿತ್ತೂ ಲೋಪ ಮಾಡಿದವನಲ್ಲ. ಅವನ ವ್ಯಕ್ತಿತ್ವಕ್ಕೆ ಸರಿಯೇ ಸಮಾನವಾದ ಸಂಗಾತಿ ಓಬವ್ವ, ಚಿತ್ರದುರ್ಗದ ರಾಜಾವೀರ ಮದಕರಿ ನಾಯಕರಲ್ಲಿ ಆಪ್ತ ಸೇವೆಕನಾಗಿ ಸೇವೆ ಸಲ್ಲಿಸುತ್ತಿದ್ದ ಮದ್ದ ಹನುಮಪ್ಪನ ಸತಿಯಾಗಿ ಬಾಳಿ ಬೆಳಗಿದ ಒಬ್ಬವ್ವ ಕೇವಲ ಓಬವ್ವ ಮಾತೆಯ ಸಾಹಸ ಕಾರ್ಯಕ್ಕೆ ಮದಕರಿ ನಾಯಕರು ಅಭಿನಂದಿಸಿ, ಆ ಸಾಹಸ ಕಾರ್ಯದ ನೆನಪಿಗೆ ಇನ್ನೊಂದು ಸುತ್ತು ಕೋಟೆ ಕಟ್ಟಿಸಿ ಅದರ ಬಾಗಿಲಿಗೆ "ಒನಕೆ ಕಿಂಡಿ ಬಾಗಿಲು" ಎಂದು ಹೆಸರಿಟ್ಟಿದ್ದು, ಒಬ್ಬವ್ವಳ ಅಪ್ರತಿಮ ಸೇವೆಯ ಪ್ರತೀಕವಾಗಿದೆ.

ಓಬವ್ವ ಮಾತೆಯ ಅಪೇಕ್ಷೆಯಂತೆ ಕುಲದೇವತೆಯಾಗಿಸಿ ಅಗಸನಕಲ್ಲು ಗ್ರಾಮವನ್ನು ಚಲವಾದಿ ಸಮುದಾಯಕ್ಕೆ ಜಹಾಗೀರಿಯಾಗಿ ನೀಡಿ, ಓಬವ್ವ ಮರಣ ಹೊಂದಿದಾಗ ದೊರೆಗಳೇ ಬಂದು ಸಂತಾಪ ಸೂಚಿಸಿ ರಾಜ ಮರ್ಯಾದೆಯೊಡನೆ ದುರ್ಗದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ತಣ್ಣೀರು ಚಿಲುಮೆಯ ಪೂರ್ವಕ್ಕೆ ಸಮಾಧಿ ಮಾಡಿಸಿದ್ದು, ಚಿತ್ರದುರ್ಗ ದೊರೆಗಳ ದಕ್ಷತೆಗೆ, ಔದಾರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಓಬವ್ವ ತ್ರಿಕಾಲಗಳಿಗೂ ಪ್ರಭಾವಿಸುವಂತಹ ವ್ಯಕ್ತಿತ್ವ ಸಂಪಾದಿಸಿದ್ದರಿಂದಲೇ ಸಾಂಸ್ಕೃತಿಕ ನಾಯಕಿ ಎಂಬ ಅಭಿದಾನಕ್ಕೆ ಅರ್ಹಳಾಗಿದ್ದಾಳೆ. ಆಕೆಯ ಸೌಜನ್ಯ, ವಿವೇಕ ವಿವೇಚನೆ, ವಿಚಾರಗಳು ಸದಾಸ್ಮರಣೀಯ. ಚಿತ್ರದುರ್ಗ ನಗರದ ಹೊಳಲ್ಕೆರ್ ರಸ್ತೆಯ ಅಗಸನ ಕಲ್ಲು ಚಲವಾದಿಗಳು ವಾಸಿಸುತ್ತಿರುವ ಸ್ಥಳದಲ್ಲಿ ಓಬವ್ವ ಮಾತೆಯ ದೇವಾಲಯ ನಿರ್ಮಾಣವಾಗಿದೆ. ನಿತ್ಯ ಪೂಜೆ ನಡೆಯುತ್ತಿದೆ ಎಂದೂ ಹೇಳಿದರು.

ಈ ಸಂದರ್ಭದಲ್ಲಿ ಯಾದಗಿರಿ ತಹಸೀಲ್ದಾರ್ ಸುರೇಶ್ ಅಂಕಲಗಿ ವೀರ ವನಿತೆ ಒನಕೆ ಒಬ್ಬವ ಸಮಿತಿ ಜಿಲ್ಲಾಧ್ಯಕ್ಷರಾದ ಗೋಪಾಲ್ ತಳಿಗೇರಿ. ಶಿವಕುಮಾರ್ ಬಂದಳ್ಳಿ. ಚಂದ್ರಕಾಂತ್ ಮುನಿಯಪ್ಪ ಶಿವಕುಮಾರ್. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾ ದೇವಿ ಮಠಪತಿ ಅನೇಕ ಮುಖಂಡರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶ್ರೀ ಗಾನಯೋಗಿ ಪ.ಪಂಚಾಕ್ಷರಿ ಸಂಗೀತ ಪಾಠ ಶಾಲೆ ಯಾದಗಿರಿ ಶ್ರೀಮತಿ ರೇಣುಕ ಎಂ.ಶಳಗಿ,

ತಬಲ ಮಹಾಂತೇಶ್ ಶಹಪುರಕರ, ವಿನಯ್ ಕುಮಾರ್ ಶಳಗಿ ಶ್ರೇಯಾ ಪಿ.ಬಿ ಸುಭಧಾ ಪುರಣಕರ,

ಚಿನ್ಮಯ್ ರೆಡ್ಡಿ ಮೈತ್ರಿ ಬಡಿಗೇರ್,ಪ್ರಾರ್ಥಿಸಿ,ಸಂಗೀತ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

# ನ. 17 ರಿಂದ 24 ರ ವರೆಗೆ ಐ.ಟಿ.ಎಫ್. ಕ್ರೀಡಾಕೂಟ: ಫೌಜಿಯಾ ತರನ್ನುಮ್ ಸೂಚನೆ

ಕಲಬುರಗಿ: ಪ್ರತಿಷ್ಠಿತ ಅಂತರಾಷ್ಟ್ರೀಯ ಐ.ಟಿ.ಎಫ್. 2024 ಪಂದ್ಯಾವಳಿಯನ್ನು ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಇದೆ ತಿಂಗಳು ನವೆಂಬರ್ 17 ರಿಂದ 24 ರಂದು ನಡೆಯುವ ಕ್ರೀಡಾಕೂಟವನ್ನು ಜಿಲ್ಲಾಡಳಿತದಿಂದ ನಡೆಸಲು ಹಲವಾರು ಪೂರ್ವ ಸಿದ್ಧತೆ ಕ್ರಮಕೈಗೊಳ್ಳಲು ಸಮಿತಿಯ ಮುಖ್ಯಸ್ಥರಿಗೆ ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ಸೂಚನೆ ನೀಡಿದರು.

ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಲವಾರು ಸಮಿತಿಗಳನ್ನು ರಚಿಸಿದ್ದು. ಸಮಿತಿಗಳ ಪ್ರಕಾರ ಏನೇನೋ ಕೆಲಸಗಳಾಬೇಕು ಪೂರ್ವ ಸಿದ್ಧತೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕೆಲಸ ಮಾಡುವಂತೆ ಖಡಕ ಸೂಚನೆ ನೀಡಿದರು.

ಐ.ಟಿ.ಎಫ್. ಪಂದ್ಯಾವಳಿಯಲ್ಲಿ ದೇಶಿಯ ವಿದೇಶಿಯ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ ಸುಮಾರು 15 ವಿದೇಶಗಳ ಕ್ರೀಡಾಪಟುಗಳು ಪಾಲ್ಗೊಳ್ಳುತ್ತಿದ್ದಾರೆ.

ಅಂತರಾಷ್ಟ್ರೀಯ ಮಾನ್ಯತೆ ಪಡೆದಂತಹ ಕ್ರೀಡಾಪಟುಗಳು ಕ್ರೀಡಾಂಗಣದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಗುಣಮಟ್ಟದ ಊಟೋಪಹಾರ, ಉತ್ತಮ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದ್ದು, ಕ್ರೀಡಾಪಟುಗಳಿಗೆ ಒಟ್ಟಾರೆ 25000 ಡಾಲರ್ ಮೊತ್ತದ ನಗದು ಪುರಸ್ಕಾರವನ್ನು ನೀಡಲಾಗುತ್ತದೆ ಎಂದು ಹೇಳಿದರು.

ಕಲಬುರಗಿ ಜಿಲ್ಲೆಯ ಹಲವಾರು ಪ್ರತಿಷ್ಠಿತ ಸರ್ಕಾರಿ/ ಖಾಸಗಿ ಸಂಸ್ಥೆಗಳಿಂದ ಪ್ರಾಯೋಜಕತ್ವವನ್ನು ಪಡೆಯಲಾಗುತ್ತಿದ್ದು, ಪ್ರಾಯೋಜಕತ್ವದ ಮೊತ್ತ ಈ ಕೆಳಕಂಡಂತಿದೆ. 1, 1. ಖಿಣಟಜ ಖಿಠಿಂಟಿಠಿಖಿಠಿ 20,00,000-00, 2. ರಿಂಭಿಚಿಣಜ ಖಿಠಿಂಟಿಠಿಖಿಠಿ 7,50,000-00, 3. Co-Sponsorship 2,00,000-00 ಆಸಕ್ತ ಸಂಸ್ಥೆಗಳು ಪ್ರಾಯೋಜಕತ್ವವನ್ನು ವಹಿಸಿಕೊಳ್ಳಬಹುದಾಗಿರುತ್ತದೆ. ಎಂದರು.

ಪಂದ್ಯಾವಳಿಯನ್ನು ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆಗೊಳಿಸಲು 14 ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಹಣಕಾಸು, ಸಮಿತಿ ಸ್ವಾಗತ ಸಮಿತಿ, ಇಂಟರನೆಟ್ ಸಮಿತಿ ಮತ್ತು ದೈನಂದಿನ ಚಟುವಟಿಕೆಗಳ ಉಸ್ತುವಾರಿ ಸಮಿತಿ ಅಧಿಕಾರಿಗಳಿಗೆ ನೀಡಿರುವ ಜಬಾಬ್ದಾರಿಗಳನ್ನು ಅತ್ಯಂತ ಪರಿಪಕ್ವತೆ ಶ್ರದ್ಧೆಯಿಂದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲು ಯಾವುದೇ ರೀತಿಯ ನ್ಯೂನತೆಗಳಾದಂತೆ ಪಂದ್ಯಾವಳಿಯನ್ನು ಯಶಸ್ವಿಗೊಳಿಸಲು ತಿಳಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಅಯುಕ್ತ ಭುವನೇಶ ದೇವಿದಾಸ ಪಾಟೀಲ, ಡಿ.ಸಿ.ಪಿ. ಕನಿಕಾ ಸಿಕ್ರಿವಾಲ್, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ಸಾಹಿತ್ಯ, ಜಿಲ್ಲಾಮಟ್ಟದ ಅಧಿಕರಿಗಳಾದ ಕೃಷಿ ಜಂಟಿ ನಿರ್ದೇಶಕ ಸಮದ್ ಪಟೇಲ್, ಡಿ.ಹೆಚ್.ಓ. ಶರಣಬಸಪ್ಪ ಖ್ಯಾತನಾಳ, ಜಿಲ್ಲಾ ಪಂಚಾಯತ್ ನಿರ್ದೇಶಕ ಜಗದೇವಪ್, ಕೈಗಾರಿಕಾ ಇಲಾಖೆ ಉಪನಿರ್ದೇಶಕ ಅಬ್ದುಲ್ ಅಜೀಮ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ ಕುಂದಳ್ಳಿ, ಪೊ□ಲಿಸ್ ಇಲಾಖೆ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡದ ಕುಲುಗುರು ಪ್ರೊ ಶಿ.ಶಿ.ಬಸವನಾಳ

■ ಉದಯರಶ್ಮಿ ದಿನಪತ್ರಿಕೆ

'ಸಾವಿಲ್ಲದ ಶರಣರು' ಲೇಖನ ಮಾಲೆ



ಕನ್ನಡದ ಕುಲು ಗುರು ಶ್ರೇಷ್ಠ ಸಂಶೋಧಕ ಕನ್ನಡದ ಕಟ್ಟಾಳು ಅಪ್ಪಟ ಬಸವ ಭಕ್ತ ಮತ್ತು ಕೆ ಎಲ್ ಈ ಸಂಸ್ಥೆಯ ಸ್ಥಾಪಕ ಸದಸ್ಯ ಕರ್ನಾಟಕ ವಿಶ್ವ ವಿದ್ಯಾಲಯದ ಸ್ಥಾಪನೆಗೆ ಕಾರಣಿ ಪುರುಷ ಹೀಗೆ ಹೇಳುತ್ತಾ ಹೋದರೆ ಪ್ರೊ.ಬಸವನಾಳರು ಮತ್ತು ಅವರ ಕೊಡುಗೆ ಬಗ್ಗೆ ಸುದೀರ್ಘ ಅಧ್ಯಯನ ಸಂಶೋಧನೆ ಅತ್ಯಗತ್ಯ. ಬದುಕಿದ್ದ 58 ವರ್ಷ ವಯಸ್ಸಿನಲ್ಲಿ ವಚನ ಸಾಹಿತ್ಯ ಮತ್ತು ಲಿಂಗಾಯತ ಧರ್ಮ ದರ್ಶನದ ಗಂಭೀರ ಅಧ್ಯಯನಕ್ಕೆ ಚಾಲನೆ ನೀಡಿದರು ಅವರು. ಹಳಕಟ್ಟಿ ಅವರು ಹಾಕಿದ ಭದ್ರ ಬುನಾದಿಗೆ ಕಳಶವಿತ್ತರು ಪ್ರೊ.ಬಸವನಾಳರು. ವಚನಗಳು ಗದ್ಯವೂ ಹೌದು, ಪದ್ಯವು ಹೌದು ಎಂದು ಪದ್ಯಗಳ ರೂಪದಲ್ಲಿ ಸಂಪಾದಿಸಿದ ಹೆಗ್ಗಳಿಕೆ ಪ್ರೊ ಶಿ.ಶಿ.ಬಸವನಾಳರಿಗೆ ಸಲ್ಲಬೇಕು.

### ಜನನ ಮತ್ತು ಶಿಕ್ಷಣ

ಎಸ್.ಎಸ್.ಬಸವನಾಳ ಅಂದರೆ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು 1893 ನವೆಂಬರ 7 ರಂದು ಹಾವೇರಿಯಲ್ಲಿ ಜನಿಸಿದರು. ಇವರ ತಂದೆ ರೇಲ್ವೆ ಸ್ಟೇಶನ್ ಮಾಸ್ತರ ಆಗಿದ್ದು ಬಳ್ಳಾರಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಇವರ ಪ್ರಾಥಮಿಕ ವಿದ್ಯಾಭ್ಯಾಸ ತೆಲುಗು ಮಾಧ್ಯಮದಲ್ಲಿ ಆಯಿತು. ಗದಗ ಮತ್ತು ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರ ವಿಷಯಗಳನ್ನು ಅಭ್ಯಸಿಸಿ, ಕ್ರಿ.ಶ.1914ರಲ್ಲಿ ಬಿ.ಎ. ಪದವಿ ಪಡೆದರು.ಇದೆ ವರ್ಷ ಇವರ ತಂದೆ ಹಾಗು ತಾಯಿ ನಿಧನರಾದರು. ಧೃತಿಗೆಡದ ಬಸವನಾಳರು ಮುಂಬಯಿಯಲ್ಲಿ'ವೀರಶೈವಆಶ್ರಮ'ದಲ್ಲಿಇದ್ದುಕೊಂಡು 1916ರಲ್ಲಿ ಎಮ್.ಎ.ಪದವಿ ಪಡೆದರು.

### ಉದ್ಯೋಗ

ಬೆಳಗಾವಿಯ ಹೈಸ್ಕೂಲಿನಲ್ಲಿ ಹಾಗು ಲಿಂಗರಾಜ ಕಾಲೇಜಿನಲ್ಲಿ ಬಸವನಾಳರು ಶಿಕ್ಷಕರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

## ಶಿಕ್ಷಣ ಪ್ರಸಾರ ಹಾಗು ಉದ್ಯೋಗ

ಶಿಕ್ಷಣಪ್ರಸಾರದಲ್ಲಿ ಆಸಕ್ತರಾದ ಬಸವನಾಳರು ಉತ್ಸಾಹಿ ಮಿತ್ರರ ಜೊತೆಗೂಡಿ 1916 ಅಕ್ಟೋಬರ 11 ರಂದು ಬೆಳಗಾವಿಯಲ್ಲಿ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸಾಯಿಟಿಯನ್ನು ಕೆ ಎಲ್ ಇ ಸಂಸ್ಥೆ ಸ್ಥಾಪಿಸಿದರು. ಅದರ ಅಂಗವಾಗಿ 1916 ನವೆಂಬರ 11 ರಂದು ಗಿಲಗಂಟಿ-ಅರಟಾಳ ಹೈಸ್ಕೂಲನ್ನು ಸ್ಥಾಪಿಸಿದರು. ಸಂಸ್ಥೆಯ ಸ್ಥಾಪನೆಗೆ ನೆರವು ನೀಡಿದ ರಾವಬಹಾದ್ದೂರ ಆರ್.ಸಿ.ಅರಟಾಳ ಮತ್ತು ರಾವಬಹಾದ್ದೂರ ಗಿಲಗಂಚಿಯವರ ಸಂಯುಕ್ತ ಹೆಸರನ್ನೆ ಈ ಹೈಸ್ಕೂಲಿಗೆ ಇಡಲಾಗಿದೆ. ಬಸವನಾಳರು ಸೊಲ್ಲಾಪುರ,ಅಕ್ಕಲಕೋಟೆ, ಮಂಗ್ರೋಳಿ ಹಾಗು ಬಾರ್ಸಿಗಳಲ್ಲಿ ಸಹ ಕನ್ನಡ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಿದರು.( ಬೆಳಗಾವಿ, ಸೊಲ್ಲಾಪುರ ಮೊದಲಾದ ಈ ಎಲ್ಲ ಊರುಗಳು ಆಗ ಮುಂಬಯಿ ಪ್ರಾಂತದಲ್ಲಿದ್ದವು).

## ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ

**1945 ರಲ್ಲಿ ರಬಕವಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಸವನಾಳರು ಅಧ್ಯಕ್ಷರಾಗಿದ್ದರು.**

### ಸಾಹಿತ್ಯ & ಸಮಾಜಸೇವೆ

ಬಸವನಾಳರು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಕಾರ್ಯಕಾರಿ ಮಂಡಳದ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಹಾಗು ಕಾರ್ಯಾಧ್ಯಕ್ಷರಾಗಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. 1930ರಲ್ಲಿ ಈ ಸಂಸ್ಥೆಯ ಅಂಗವಾಗಿ 'ಸಾಹಿತ್ಯ ಸಮಿತಿ'ಯನ್ನು ಪ್ರಾರಂಭಿಸಿ, ಅದರ ಕಾರ್ಯಾಧ್ಯಕ್ಷರಾಗಿ ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

1923ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರಾದರು. ಈ ಸಂಸ್ಥೆಯ ಪರವಾಗಿ ಬಸವನಾಳರು ನಾಗವರ್ಮನ ಕಾವ್ಯಾವಲೋಕನ ಹಾಗು ಭಟ್ಟಾಕಲಂಕದೇವನ ಶಬ್ದಾನುಶಾಸನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದರು.

1929 ರಿಂದ 1938 ರವರೆಗೆ ಬಸವನಾಳರು ಮುಂಬಯಿ ವಿಶ್ವವಿದ್ಯಾಲಯದ ಫೆಲೊ ಆಗಿದ್ದರು. ಅಲ್ಲದೆ ಸುಮಾರು 20 ವರ್ಷ ಕಾಲ ಕನ್ನಡ ಪಠ್ಯ ಪುಸ್ತಕ ಸಮಿತಿಯ ಸದಸ್ಯರಾಗಿ ದುಡಿದಿದ್ದಾರೆ.

## ಬಸವನಾಳರ ಸಾಹಿತ್ಯಕಾರ್ಯ

**ಸಂಪಾದನೆ**
* ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ
* ಚಾಮರಸನ ಪ್ರಭುಲಿಂಗ ಲೀಲೆ
* ನಾಗವರ್ಮನ ಕಾವ್ಯಾವಲೋಕನಂ
* ಷಡಕ್ಷರದೇವನ ಶಬರಶಂಕರ ವಿಳಾಸಂ
* ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯದರ್ಪಣ
* ಮೈಲಾರದ ಬಸವಲಿಂಗಶರಣರ ಕೃತಿಗಳು
* ಸರ್ಪಭೂಷಣ ಶಿವಯೋಗಿಗಳ ಕೈವಲ್ಯಕಲ್ಪವಲ್ಲರಿ
* ಹರಿಹರನ ಮೂರು ರಗಳೆಗಳು
* ಬಸವಣ್ಣನವರ ಷಟ್‌ಸ್ಥಲದ ವಚನಗಳು

**ಸಾಹಿತ್ಯರಚನೆ**
* ಶರಣ ತತ್ವಪ್ರಕಾಶನ
* ಕೌಟುಂಬಿಕ ಜೀವನ

1918 ರಿಂದ 1927 ರವರೆಗೆ ಬೆಳಗಾವಿಯಲ್ಲಿ ಪ್ರಬೋಧ ಎಂಬ ಮಾಸಿಕವನ್ನು ನಡೆಯಿಸಿದರು. ಧಾರವಾಡದ ಜಯಕರ್ನಾಟಕ ಪತ್ರಿಕೆಗೆ ಸಂಪಾದಕರಾಗಿ ಸಹ ಬಸವನಾಳರು ಸೇವೆ ಸಲ್ಲಿಸಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿಯೂ ಸಹ ಬಸವನಾಳರು ತಮ್ಮ ಕಾಣಿಕೆ ನೀಡಿದ್ದಾರೆ. ಧಾರವಾಡದ ಕರ್ನಾಟಕ ಸೆಂಟ್ರಲ್ ಕೊಆಪರೇಟಿವ್ ಬ್ಯಾಂಕ್ ಇದರ ಪ್ರಥಮ ಮ್ಯಾನೇಜಿಂಗ ಡೈರೆಕ್ಟರ್ ಆಗಿದ್ದರು.

### ಕೌಟುಂಬಿಕ ಜೀವನ

ಬಸವನಾಳರ ಮದುವೆ 1920 ಮೇ 10ರಂದು ದಾವಣಗೆರೆಯ ವರ್ತಕರಾದ ಸಾವಳಗಿ ನಾಗಪ್ಪನವರ ಮಗಳು ಶಾಂತಾ ಇವರೊಡನೆ ರಾಣಿಬೆನ್ನೂರು ಊರಿನಲ್ಲಿ ಜರುಗಿತು. ಇವರಿಗೆ 10 ಜನ ಮಕ್ಕಳು: 4 ಹುಡುಗರು ಹಾಗು 6 ಹುಡುಗಿಯರು.

### ಶಿವಲಿಂಗಪ್ಪ ಶಿವಯೋಗಪ್ಪ ನಿಧನ

ಬಸವನಾಳರು 1951 ಡಿಸೆಂಬರ 22 ರಂದು ಕರ್ನಾಟಕ ಸಿಂಡಿಕೇಟ್ ಮೀಟಿಂಗ್ ಮುಗಿಸಿಕೊಂಡು ಬಂದು ಮಗಳಿಗೆ ಕಾಫೀ ತರಲು ಹೇಳಿ ಮಲಗುವ ಕೊನೆಯಲ್ಲಿ ಮಂಚದ ಮೇಲೆ ಮಲಗಿದಾಗ ಹೃದಯಾಘಾತದಿಂದ ಪ್ರೊ ಎಸ ಎಸ್ ಬಸವನಾಳರು ನಿಧನರಾದರು.



ಲೇಖನ
■ ಡಾ.ಶಶಿಕಾಂತ ಪಟ್ಟಣ
ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರ,
ಪುಣೆ - ರಾಮದುರ್ಗ

# ಸಿಂದಬದಗಿ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ),ಮಲ್ಲಿಕಾರ್ಜುನ ಶೇಕಪ್ಪಾ ಅಧ್ಯಕ್ಷ, ಸಮಿರೋದ್ದಿನ್



ಹುಮನಾಬಾದ್: ತಾಲ್ಲೂಕಿನ ಸಿಂದಬಂದಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ)ಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಶೇಕಪ್ಪಾ ಅಧ್ಯಕ್ಷರಾದರೆ ಸಮಿರೋದ್ದಿನ್ ಸುಲ್ತಾನಸಾಬ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರೆ ನಾಮಪತ್ರಸಲ್ಲಿಸಿರುವ ಪ್ರಯುಕ್ತ ನಿಗದಿತ ಅವಧಿಗೆ ಸಹಕಾರ ಇಲಾಖೆಯ ಚುನಾವಣಾ ಅಧಿಕಾರಿ ಎಂ.ಡಿ.ಖುದ್ದುಸ್ ಅವರು ಮಲ್ಲಿಕಾರ್ಜುನ ಶೇಕಪ್ಪಾ ಅಧ್ಯಕ್ಷ, ಸಮಿರೋದ್ದಿನ್ ಸುಲ್ತಾನಸಾಬ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ. ಎಂದು ಘೋಷಿಸಿದರು.

ಇದೇ ವೇಳೆ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರಮೇಶ್ ಡಾಕುಳಗಿ ಅವರ ನೇತ್ರತ್ವದಲ್ಲಿ ಪಿಕೆಪಿಎಸ್ ಅಧ್ಯಕ್ಷ ಮಲ್ಲಿಕಾರ್ಜುನ ಶೇಕಪ್ಪಾ, ಉಪಾಧ್ಯಕ್ಷ ಸಮಿರೋದ್ದಿನ್ ಸುಲ್ತಾನಸಾಬ ಹಾಗೂ ಸದಸ್ಯರಿಂದ ಡಾಕುಳಗಿ ಗ್ರಾಮದ ಶಿವಾನಂದ ಸ್ವಾಮಿ ಮಠಪತಿ ಅವರಿಗೆ ಬೆಳ್ಳಿ ಕಿರಿಟ್ ತೋಡಿಸಿ ಸನ್ಮಾನಿಸಿ, ಗೌರವಿಸಿದರು. ಬಳಿಕ ಅಭಿಮಾನಿ ಬಣಗದಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಪಿಕೆಪಿಎಸ್ ಸದಸ್ಯರಾದ ಅನಿಲ್‌ಕುಮಾರ ಅಣ್ಣೆಪ್ಪಾ, ಉಮೇಶ ಮಡೇಪ್ಪಾ, ದೀನಕರರಾವ್ ಭಗವಾನರಾವ್, ಪ್ರಶಾಂತ ವೈಜಿನಾಥ, ರಮೇಶ ದೇವಿಂದ್ರ, ಶರಣಪ್ಪಾ ಗುಂಡಪ್ಪಾ, ವೈಜಿನಾಥ ನಿಂಗಪ್ಪಾ, ಪ್ರಭು ಕಲ್ಲಪ್ಪಾ, ಈರಮ್ಮಾ ಮಲ್ಲಿಕಾರ್ಜುನ, ಕಸ್ತೂರಬಾಯಿ ಶರಣಪ್ಪಾ ಸೇರಿದಂತೆ ಪ್ರಮುಖರಾದ ಮಲ್ಲಪ್ಪಾ ಅಣದೂರೆ, ವಿನೋದ ಮುತ್ತಣ್ಣ, ಶಿವರಾಜ ಲಾಡಕರ್, ಚಂದು ಮಾಲೆ ಡಾಕುಳಗಿ, ಬಾಬು ಮಾಲೆ ಡಾಕುಳಗಿ, ವೀರೇಶ ಮಠಪತಿ, ಶಫೀ ಅಲಿ, ಶಾಬ್ಬೀರಮಿಯ್ಯ ಇಮಾಮದಾರ್, ವಿಠಲ ಲಾಡಕರ್, ಪ್ರಭು ಸಿದ್ದಗುಂಡೆ, ಬಾಬು ಘೋಡವಾಡಿ, ಅಹೆಮದ್ ಪಾಶಾ, ಸುಭಾಷ ಗೌರಿ, ಶರಣಪ್ಪಾ ಸರ್, ರಮೇಶ, ರಾಜುಕುಮಾರ ಹನಮಶೆಟ್ಟಿ, ಇದ್ದರು.

# ನೌಕರರ ಸಂಘಕ್ಕೆ ಅವಿರೋಧ ಆಯ್ಕೆ



ಔರಾದ್ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಔರಾದ್ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಪ್ರಾಥಮಿಕ ಶಾಲಾ ಶಿಕ್ಷಕ ವಿಭಾಗದಿಂದ ನಿರ್ದೇಶಕರಾಗಿ ಆಯ್ಕೆಯಾದ ಪಂಡರಿ ಆಡೆ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಧೂಳಪ್ಪ ಮಳೆನೋರ್ ತಿಳಿಸಿದ್ದಾರೆ.

ಸೋಮವಾರ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ ತಾಪಂ ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ ಅವರು ನಾಮಪತ್ರ ಹಿಂಪಡೆದು ಪಂಡರಿ ಆಡೆ ಅವರಿಗೆ ಬೆಂಬಲ ನೀಡಿದರು.

ಸಂಘದ ರಾಜ್ಯ ಪರಿಷತ್ ಸದಸ್ಯರಾಗಿ ತೋಟಗಾರಿಕೆ ಇಲಾಖೆಯ ಸಂದೀಪ ಹಾಗೂ ಖಜಾಂಚಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಂ. ಅಬ್ದುಲ್ ಖಲೀಲ್ ಹಾಗೂ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಹೇಳಿದರು.

# ನೋಟಿಸ್ ಹಿಂಪಡೆಯಲು ಆದೇಶ: ಸ್ವಾಗತ

ಬೀದರ್: ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ರೈತರಿಗೆ ನೀಡಲಾದ ನೋಟಿಸ್ ಹಿಂಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶಿಸಿರುವುದು ಸ್ವಾಗತಾರ್ಹ ಎಂದು ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ತಾನಾಜಿ ಸಗರ್ ತಿಳಿಸಿದ್ದಾರೆ.

ಜಮೀನಿನ ಪಹಣಿಗಳಲ್ಲಿ ವಕ್ಫ್ ಪದ ಸೇರಿಕೊಂಡಿದ್ದಕ್ಕೆ ಹಾಗೂ ನೋಟಿಸ್ ನೀಡಿದ್ದಕ್ಕೆ ಅನೇಕ ರೈತರು ಆತಂಕಕ್ಕೆ ಒಳಗಾಗಿದ್ದರು. ಸರ್ಕಾರದ ಅಧಿಕೃತ ಆದೇಶದಿಂದ ನಿರಾಳರಾಗಿದ್ದಾರೆ ಎಂದು ಪ್ರತಿಕ್ರಿಯಿಸಿದ್ದಾರೆ.

ವಕ್ಫ್ ಹೆಸರಿಗೆ ರೈತರು ಹಾಗೂ ಇತರರ ಆಸ್ತಿ ಖಾತೆ ಮಾಡಲಾಗುತ್ತಿದೆ ಎಂಬ ದೂರುಗಳು ಎಲ್ಲೆಡೆ ಕೇಳಿ ಬಂದಿದ್ದವು. ಇದೀಗ ಈ ವಿಷಯಕ್ಕೆ ಸಂಬಂಧಿಸಿದಂತೆ ಮ್ಯೂಟೇಷನ್ ಮಾಡಲು ಯಾವುದೇ ಕಚೇರಿ ಅಥವಾ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ಹಿಂಪಡೆಯಬೇಕು.

ಮ್ಯುಟೇಷನ್ ಪ್ರಕ್ರಿಯೆ ಸ್ಥಗಿತಗೊಳಿಸಬೇಕು. ಈಗಾಗಲೇ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರ ವಿರುದ್ಧ ಯಾವುದೇ ಕ್ರಮ ಜರುಗಿಸಬಾರದು ಎಂದು ಸೂಚನೆ ನೀಡಿರುವುದು ರೈತರು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ ಎಂದು ಹೇಳಿದ್ದಾರೆ.

# ಐಕ್ಯತೆ ಸಮಾವೇಶದ ಭಿತ್ತಿಪತ್ರ ಹಂಚುವ ಕಾರ್ಯಕ್ಕೆ ಚಾಲನೆ



ಕೆಂಭಾವಿ : ಇದೇ ನವೆಂಬರ್ 25 ರಂದು ರಾಜಕೀಯ ಜಾಗೃತಿಗಾಗಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ವತಿಯಿಂದ ಬೆಂಗಳೂರಿನಲ್ಲಿ

ನಡೆಯುವ ಐಕ್ಯತಾ ಸಮಾವೇಶದ ಭಿತ್ತಿ ಪತ್ರ ಹಂಚುವ ಕಾರ್ಯಕ್ರಮಕ್ಕೆ ಪಟ್ಟಣದ ಪೋಲಿಸ್ ಠಾಣೆಯ

ಪಿ ಎಸ್ ಐ ಅಮೋಜ್ ಕಾಂಬ್ಳೆ ಚಾಲನೆ ನೀಡಿದರು,ಈ ಸಂದರ್ಭದಲ್ಲಿ ಸೇನೆಯುವ ಘಟಕದ ಅಧ್ಯಕ್ಷರಾದ ಪರಶುರಾಮ ಎಂ ಬೋನಾಳ್.. ಮೌನೇಶ್.. ಪತ್ತೇಪುರ ಗೌರವಾಧ್ಯಕ್ಷರಾದಪರಶುರಾಮ ಕಟ್ಟಿಮನಿ. ತಾಲೂಕ ಕಾರ್ಯದರ್ಶಿ ಬಸವರಾಜ ಯಡೆಯಾಪುರ. ಮಾಲಹಳ್ಳಿ ಗ್ರಾಮ ಘಟಕದ ಅಧ್ಯಕ್ಷರಾದ ಸಿದ್ದು ಬಡಿಗೇರ . ಹೋಬಳಿ ಘಟಕದ ಅಧ್ಯಕ್ಷರಾದ ರಾಮು ಯಾಳಗಿ. ಕಾರ್ಯದರ್ಶಿ ಸಾಯಿಬಣ್ಣ ಯಾಳಗಿ ಸೇರಿದಂತೆ ಸಂದರ್ಭದಲ್ಲಿ ಠಾಣೆಯ ಸಿಬ್ಬಂದ್ದಿ ಸೇರಿದಮತರ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಎಲ್ಲಾ ಕಾರ್ಯಕರ್ತರು ಸೇರಿದಂತೆ ಇತರಿದ್ದರು.

# ಚನ್ನಬಸವ ಪಟ್ಟದ್ದೇವರು ಶಾಲೆಯಲ್ಲಿ ವಿವಿಧ ಸ್ಪರ್ಧೆಗಳ ಉದ್ಘಾಟನೆ



ಕಮಲನಗರ : ಪಟ್ಟಣದ ಡಾ॥ ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆ, ಶ್ರೀ ಗುರಪ್ಪಾ ಟೊಣ್ಣೆ ಪ್ರಾಥಮಿಕ ಶಾಲೆ ಹಾಗೂ ಗುರು ಕಾರುಣ್ಯ ಪಬ್ಲಿಕ್ ಸ್ಕೂಲ್‌ನಲ್ಲಿ 45ನೇ ಶರಣ ಕಮ್ಮಟ ಅನುಭವ ಮಂಟಪ ಉತ್ಸವ ಹಿನ್ನಲೆಯಲ್ಲಿ ಮಕ್ಕಳಿಗಾಗಿ 2024 ನಿಮಿತ್ಯ ತಾಲ್ಲೂಕಾ ಮಟ್ಟದ ಶರಣರ ವಚನ ಗಾಯನ, ವಚನ ಭಾಷಣ, ವಚನ ಭಾವಾರ್ಥ ಲೇಖನ, ಶರಣರ ಕುರಿತು ರಸಪ್ರಶ್ನೆ ಹಾಗೂ ರೂಪಕ ನಾಟಕ ಜರಿಗುದವು.

ಕಾರ್ಯಕ್ರಮದ ಉದ್ಘಾಟನೆಯನ್ನು ಕಮಲನಗರದ ಪಿ.ಎಸ್.ಐ ರಾದ ಶ್ರೀ ಚಂದ್ರಕಾಂತ ನಿರ್ಣಾ ನೆರವೇರಿಸಿದರು. ಬಸವ ಪೂಜೆಯನ್ನು ಗ್ರಾಮ ಪಂಚಾಯತ ಅಭಿವೃಧಿ ಅಧಿಕಾರಿಯಾದ ಶ್ರೀ ರಾಜಕುಮಾರ ತಂಬಾಕೆ ಸಲ್ಲಿಸಿದರು,

ಶಾಲೆಯ ಆಡಳಿತಾಧಿಕಾರಿಯಾದ ಶ್ರೀ ಚನ್ನಬಸವ ಘಾಳೆರವರು ಕಾರ್ಯಕ್ರಮವನು ಉದ್ದೇಶಿಸಿ ಅನುಭವಮಂಟಪ ಉತ್ಸವನ್ನು ಪರಮ ಪೂಜ್ಯರಾದ ನಾಡೋಜ ಶ್ರೀ ಡಾ॥ ಬಸವಲಿಂಗ ಪಟ್ಟದ್ದೇವರು 12ನೇ ಶತಮಾನದ ಶರಣರ ಸಾಮಾಜಿಕ ಪರಿವರ್ತನೆಗೆ ಮಾಡಿದ ಕಾರ್ಯವನ್ನು ತಿಳಿಸಿದರು.

ಈಸಂದರ್ಭದಲ್ಲಿಕಾರ್ಯಕ್ರಮದನಿರ್ಣಾಯಕರಾಗಿ ಶ್ರೀ ಚಂದ್ರಕಾತ ಬಿರಾದರ, ಶ್ರೀ ಮಡಿವಾಳ ಮಹಾಜನ, ಶ್ರೀ ಎಸ್.ಎಸ್. ಮೈನಾಳೆ, ಶ್ರೀ ದಶರಥ ಔರಾದೆ, ಶ್ರೀ ರಾಜೇಂದ್ರ ಭಾಲೇಕರ, ಶ್ರೀ ಉಮಾಕಾಂತ ಸುಲಾಕೆ, ಶ್ರೀ ನಾಗನಾಥ ಮಠ ಹಾಗೂ ಶ್ರೀಮತಿ ಫರಾಹ ಇನ್ನಿತರರಿದ್ದರು.

ಕಾರ್ಯಕ್ರಮದ ಸಂಯೋಜಕರಾಗಿ ಶ್ರೀಯುತ ಚನ್ನಬಸವ ಘಾಳೆ ಹಾಗೂ ಮಹಾದೇವ ಮಾಡಿವಾಳ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ನಡೆಯಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನುಶ್ರೀ ಹಾವಗಿರಾವ ಮಠಪತಿ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಗುರುಕಾರುಣ್ಯ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲರಾದ ಶ್ರೀ ಶ್ರೀಧರ ರಡ್ಡಿ, ಶ್ರೀ ತಾನಾಜಿ ಕಿಟ್ಟಾ, ರಾಜೇಶ್ವರಿ ಬಿರಾದರ, ಶಿವಕುಮಾರ ಎಕಲಾರೆ, ವಿಶಾಲ ಸೋಲಾಪುರೆ,ಪಲ್ಲವಿ ನಾಯ್ಕ, ಕಾಮಾಕ್ಷಿ ಸುತಾರ, ಅರ್ಚನಾ ನಾಯ್ಕ ಹಾಗೂ ಶಾಲೆಯ ಸಿಬ್ಬಂದಿವರ್ಗದವರು ಉಪಸ್ಥಿತರಿದರು.

# ಸಿದ್ದರಾಮ ಉಪ್ಪಿನ್ ಕವಿ ದಂಪತಿಯ ದೇಹದಾನ



■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಇಲ್ಲಿಯ ಹಿರಿಯ ಕಾದಂಬರಿಕಾರ ಸಿದ್ದರಾಮ ಉಪ್ಪಿನ ಮತ್ತು ಅವರ ಬಾಳ ಸಂಗಾತಿ ಕವಯತ್ರಿ ರೇವತಿ ಅವರು ವಿಜಯಪುರದ ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲದ ಅಂಗರಚನಾಶಾಸ್ತ್ರ ವಿಭಾಗಕ್ಕೆ ಈರ್ವರು ತಮ್ಮ ದೇಹದಾನ ಒಮ್ಮಿಲೇ ಮಾಡಿರುವರು.

ಸಂಸ್ಥೆಯ ಪ್ರಾಚಾರ್ಯ/ ಕಾರ್ಯದರ್ಶಿ ಜಿ.ಎಂ. ಪಾಟೀಲ ಮತ್ತು ಆರ್.ಪಿ.ಮೆಳ್ಳಿ ಅವರ ಸಮ್ಮುಖದಲ್ಲಿ ಈ ಜನೋಪಯೋಗಿ ಸಫಲ ಕಾರ್ಯ ಮಾಡಿದ್ದು ಒಳ್ಳೆಯ ಶ್ಲಾಘನೀಯವಾಗಿದೆ.

ಈ ದೇಹದಾನದ ಹುಟ್ಟು ಹಾಕಿದವರು ಪೂಜ್ಯ ಸಿದ್ದೇಶ್ವರ ಶ್ರೀಗಳು ಎಂಬುದು ಸದಾ ಸ್ಮರಣೀಯವಾಗಿದೆ.

ಉಪ್ಪಿನ ಕುಟುಂಬದ ಸಾಕ್ಷಿಯಾಗಿ ಅವರ ಆಪ್ತ ರಾಜಶೇಖರ ಭೋವಿ ಹಾಗೂ ಅವರ ಮಗ, ಪತ್ರಕರ್ತ ಶಿವಕುಮಾರ್ ಪ್ರೀತ್ಯಾಧರ ಸಮ್ಮತಿ ತೋರಿಸಿರುವರು.

# ಲೈಸನ್ಸ್ ಹೊಂದಿದ ಶಸ್ತ್ರಾಸ್ತ್ರ ಜಮೆ ಮಾಡಲು ಆದೇಶ

■ ಉದಯರಶ್ಮಿ ದಿನಪತ್ರಿಕೆ



## ಗ್ರಾಪಂ ಉಪ ಚುನಾವಣೆ

ವಿಜಯಪುರ: ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸ್ಥಾನಗಳಿಗೆ ಉಪ ಚುನಾವಣೆ ಘೋಷಣೆಯಾಗಿರುವುದರಿಂದ ಶಾಂತಿ ಸುವ್ಯವಸ್ಥೆ ಕಾಪಾಡಲು ಮುಂಜಾಗ್ರತಾ ಕ್ರಮವಾಗಿ ಚುನಾವಣೆ ನಡೆಯುವ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಆಯುಧ ಲೈಸನ್ಸದಾರರು ತಮ್ಮ ಎಲ್ಲ ಶಸ್ತ್ರಾಸ್ತ್ರಗಳನ್ನು ಹಾಗೂ ಮದ್ದು ಗುಂಡುಗಳನ್ನು ತಕ್ಷಣವೇ ಸಮೀಪದ ಪೊಲೀಸ್ ಠಾಣೆಯಲ್ಲಿ ಜಮೆ ಮಾಡುವಂತೆ ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ನಿಡಗುಂದಿ ತಾಲೂಕಿನ ಆಲಮಟ್ಟಿ ಗ್ರಾಮ ಪಂಚಾಯತಿಯ ಅರಳದಿನ್ನಿ ಹಾಗೂ ಚಿಮ್ಮಲಗಿ ಗ್ರಾಮ ಪಂಚಾಯತಿಯ ಚಿಮ್ಮಲಗಿ ಕ್ಷೇತ್ರಕ್ಕೆ, ಇಂಡಿ ತಾಲೂಕಿನ ಸಾಲೋಟಗಿ ಹಾಗೂ ಖೇಡಗಿ ಗ್ರಾಮ ಪಂಚಾಯತ್, ಬಸವನಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮ ಪಂಚಾಯಿತಿಯ ನಾಗರಾಳ ಹುಲಿ, ಮುತ್ತಗಿ ಹಾಗೂ ಬ್ಯಾಕೋಡ ಗ್ರಾಮ ಪಂಚಾಯತಿಯ ಜಯವಾಡಗಿ ಉಪ ಚುನಾವಣೆ ನಡೆಸಲಾಗುವುದು.

ಬಬಲೇಶ್ವರ ತಾಲೂಕಿನ ಬೋಳಚಿಕ್ಕಲಕಿ ಗ್ರಾಮ ಪಂಚಾಯತಿಯ ಕಾತ್ರಾಳ ಕ್ಷೇತ್ರಕ್ಕೆ, ವಿಜಯಪುರ ತಾಲೂಕಿನ ಕನ್ನೂರ, ನಾಗಠಾಣ, ಜುಮನಾಳ ಹಾಗೂ ಹೊನಗನಹಳ್ಳಿ ಗ್ರಾಮ ಪಂಚಾಯತಿಗೆ, ಮುದ್ದೇಬಿಹಾಳ ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತಿಗೆ, ತಾಳಿಕೋಟೆ ತಾಲೂಕಿನ ಹಿರೂರ ಗ್ರಾಮ ಪಂಚಾಯತಿಯ ತಮದಡ್ಡಿ, ಚಡಚಣ ತಾಲೂಕಿನ ಲೋಣಿ ಬಿ.ಕೆ ಮತ್ತು ಚಡಚಣ ತಾಲೂಕಿನ ಹತ್ತಳ್ಳಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಆಯುಧ ಲೈಸನ್ಸದಾರರು ತಮ್ಮ ಎಲ್ಲಾ ಶಸ್ತ್ರಾಸ್ತ್ರಗಳು ಅಂದರೆ ಎಸ್.ಬಿ.ಬಿ.ಎಲ್/ಡಿ.ಬಿ.ಬಿ.ಎಲ್, ಬಂದೂಕು, ರೈಫಲ್, ರಿವಾಲ್ವರ್ ಹಾಗೂ ಪಿಸ್ತೂಲುಗಳನ್ನು ಹೊಂದಲು ಕೊಟ್ಟ ಲೈಸನ್ಸ್‌ಗಳನ್ನು ನವೆಂಬರ್ 06 ರಿಂದ ನವೆಂಬರ್ 26ರವರೆಗೆ ಸ್ಥಗಿತಗೊಳಿಸಲಾಗಿದೆ.

ಈ ಆದೇಶವು ಬ್ಯಾಂಕುಗಳು ಮತ್ತು ಫ್ಯಾಕ್ಟರಿಗಳ ಭದ್ರತೆಗೋಸ್ಕರ ಪಡೆದುಕೊಂಡ ಆಯುಧಗಳಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದೆ.

# ಸಂದೀಪ ಮರ್ಚಂಟ್ಸ್ ದಂಪತಿಗೆ ಶಾಸಕ ಬಸನಗೌಡರಿಂದ ಸನ್ಮಾನ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ 11 ಸರ್ಕಾರಿ ಶಾಲೆಗಳಿಗೆ ಪೀಠೋಪಕರಣಗಳು ಹಾಗೂ ಕಲಿಕಾ ಸಾಮಾಗ್ರಿಗಳನ್ನು ಕೊಡುಗೆಯಾಗಿ ನೀಡಿರುವ ಮುಂಬೈನ ತಪತಿದಾಸ್ ಮತ್ತು ತುಳಸಿದಾಸ್ ವಜ್ರದಾಸ್ ಚಾರಿಟೇಬಲ್ ಟ್ರಸ್ಟ್ ನ ಟ್ರಸ್ಟಿಗಳಾದ ಸಂದೀಪ ಮರ್ಚಂಟ್ಸ್ ದಂಪತಿಗಳನ್ನು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ರವರು ಬುಧವಾರ ಸನ್ಮಾನಿಸಿ, ಅಭಿನಂದನಾ ಪತ್ರ ನೀಡಿದರು.

ವಿಜಯಪುರ ನಗರಾದ್ಯಂತ ಸಂಚರಿಸಿದ ಮರ್ಚಂಟ್ಸ್ ದಂಪತಿಗಳು, ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳರು ಅಭಿವೃದ್ಧಿಪಡಿಸಿರುವ ರಸ್ತೆಗಳು, ಉದ್ಯಾನವನಗಳು, ಓಪನ್ ಜಿಮ್, ಸುಂದರ ಬೀದಿ ದೀಪಗಳು, ಪುತ್ಥಳಿಗಳ ಸ್ಥಾಪನೆ ಸೇರಿದಂತೆ ಮತ್ತಿತರೆ ಅಭಿವೃದ್ಧಿ ಕಾರ್ಯಗಳ ಕುರಿತು ಹಾಗೂ ಶಾಸಕರ ಅಧ್ಯಕ್ಷತೆಯ ಸಿದ್ದೇಶ್ವರ ಸಂಸ್ಥೆಯ ರಾಮನಗೌಡ ಬಾ.ಪಾಟೀಲ ಯತ್ನಾಳ ಗೋ ರಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ಮಾಡಿರುವ ಅತ್ಯುತ್ತಮ ವ್ಯವಸ್ಥೆ ಬಗ್ಗೆ ಶ್ಲಾಘನೀಯ ವ್ಯಕ್ತಪಡಿಸಿದರು.

ಟ್ರಸ್ಟ್ ವಿಜಯಪುರ ಸಂಯೋಜಕ ವಿಶ್ವನಾಥ ಸಿಂದಗಿ, ಮಹಾನಗರ ಪಾಲಿಕೆ ಸದಸ್ಯರಾದ ಶಿವರುದ್ರ ಬಾಗಲಕೋಟ, ರಾಜಶೇಖರ ಕುರಿಯವರ, ಯುವ ಮುಖಂಡ ಯೋಗೀಶ ನಡುವಿನಕೇರಿ ಸೇರಿದಂತೆ ಮತ್ತಿತರರು ಇದ್ದರು.

# ನ.20 & 21ರಂದು ಬೃಹತ್ ಉದ್ಯೋಗ ಮೇಳ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ಕೈಗಾರಿಕೆಮತ್ತುಮೂಲಭೂತ ಸೌಕರ್ಯಗಳು ಹಾಗೂ ವಿಜಯಪುರ ಜಿಲ್ಲೆ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲರವರ ಸೂಚನೆ ಮೆರೆಗೆ ಬೆಂಗಳೂರು ಬಿಡದಿಯ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಲಿ. ವತಿಯಿಂದ ದಿ.20 ಬುಧವಾರ ಮತ್ತು 21 ಗುರುವಾರ ರಂದು ಬೃಹತ್ ಉದ್ಯೋಗ ಮೇಳ ಬಿ.ಎಲ್.ಡಿ.ಇ ಸಂಸ್ಥೆ ಸಂಗನಬಸವ ಪಾಲಿಟೆಕ್ನಿಕ್ ನಲ್ಲಿ ಆಯೋಜಿಸಲಾಗಿದೆ.

ಈ ಉದ್ಯೋಗ ಮೇಳದಲ್ಲಿ ವಿಜಯಪುರ ಜಿಲ್ಲೆಯ 2023 ರಲ್ಲಿ ಡಿಪ್ಲೋಮಾ ಮತ್ತು ಐಟಿಐ ಪಾಸಾದ ಹಾಗೂ 2024ರಲ್ಲಿ ಪ್ರಸ್ತುತ ಐದನೇ ಸೆಮಿಸ್ಟರ್ ನಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದೆ.

ತಮ್ಮ ಹೆಸರನ್ನು ಆನ್ ಲೈನ್ ಮೂಲಕ ನೋಂದಾಯಿಸಲು ದಿ.19 ಮಂಗಳವಾರ ಸಂ.5ಗಂ. ವರೆಗೆ ಇರುತ್ತದೆ ಹಾಗೂ ಮೇಳದ ದಿನದಂದೆ ಸ್ಥಳದಲ್ಲಿಯೇ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ದಿ.20 ಬುಧವಾರ ಬೆ.9.30ಗಂ. ನೋಂದಣಿ ಮಾಡಿದ ವಿದ್ಯಾರ್ಥಿಗಳ ವಿಭಾಗವಾರು ಲಿಖಿತ ಪರೀಕ್ಷೆ ನಡೆಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ದಿ.21 ಗುರುವಾರ ಸಂದರ್ಶನ ಮತ್ತು ವೈದ್ಯಕೀಯ ಪರೀಕ್ಷೆ ನಡೆಸಲಾಗುವುದು. ಮೇಳದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಬಯೋಡಾಟಾ ಮತ್ತು ಅಂಕಪಟ್ಟಿಗಳ ಪ್ರತಿಗಳು ಕಡ್ಡಾಯವಾಗಿ ತರಬೇಕು ಎಂದು ಮೇಳದ ಆಯೋಜಕ ಪ್ರಾಚಾರ್ಯ ಪಿ.ಬಿ.ಕಳಸಗೊಂಡ ತಿಳಿಸಿದ್ದಾರೆ.

ನೋಂದಣಿ ಲಿಂಕ್: https://forms.gle/EEy3dQD1wxyaJggp8. ಮಾಹಿತಿಗಾಗಿ ಎಸ್.ವಿ.ಕುಲಕರ್ಣಿ 9449246255, ವಿ.ಎಸ್. ಮರಿಮಠ 9916853605 ಸಂಪರ್ಕಿಸಿ.

# ಇಂದಿಗೂ ಪ್ರಸ್ತುತವಾಗಿ ನಿಲ್ಲುವ ಬಸವಣ್ಣ : ಕಲ್ಯಾಣಶೆಟ್ಟಿ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಜಗತ್ತಿನಲ್ಲಿ ಬಿದ್ದವರನ್ನು ಮೇಲೆತ್ತಿದ, ಧ್ವನಿ ಇಲ್ಲದವರಿಗೆ ಧ್ವನಿ ನೀಡಿದ, ಮಹಿಳೆಗೆ ಸ್ವಾತಂತ್ರ್ಯ ನೀಡಿದ ಬಸವಣ್ಣನವರು ನಮಗೆ ಇಂದಿಗೂ ಪ್ರಸ್ತುತವಾಗಿ ನಿಲ್ಲುತ್ತಾರೆ ಎಂದು ಹಂಗರಗಿಯ ಚನ್ನಬಸವೇಶ್ವರ ಪ್ರತಿಷ್ಠಾನ ಅಧ್ಯಕ್ಷ, ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಅಭಿಪ್ರಾಯ ಪಟ್ಟರು.

ಪಟ್ಟಣದ ಲಕ್ಷ್ಮೀ ನಗರದ ಕ್ವಾಟಿ ಲಕ್ಷ್ಮೀ ಜಾತ್ರೋತ್ಸವದಂಗವಾಗಿ ಹನ್ನೊಂದು ದಿನಗಳ ಕಾಲ ಹಮ್ಮಿಕೊಂಡಿರುವ ಪ್ರವಚನ ಕಾರ್ಯಕ್ರಮದಲ್ಲಿ ಮಂಗಳವಾರ ಸಂಜೆ ಮಾತನಾಡಿದ ಅವರು, ಸಮಾಜದಲ್ಲಿರುವ ಮಡಿ-ಮೈಲಿಗೆಗಳನ್ನು ಯಾವುದೇ ಮುಚ್ಚು ಮರೆ ಇಲ್ಲದೇ ತಿದ್ದಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಜಗತ್ತಿನ ಇತಿಹಾಸದಲ್ಲಿ ಅದೆಷ್ಟೋ ಕ್ರಾಂತಿಗಳು ನಡೆದಿವೆ. ಆದರೆ ಬಸವಾದಿ ಶರಣರ ಕ್ರಾಂತಿ ಇಡೀ ಸಮಾಜವನ್ನೇ ಎತ್ತರದ ಮಟ್ಟಕ್ಕೆ ಒಯ್ಯುವ ಆಶಯದಿಂದ ನಡೆದ ಕ್ರಾಂತಿಯಾಗಿದೆ ಎಂದರು.

ಬಸವಾದಿ ಶರಣರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡುವ ಮೂಲಕ ಕಾಯಕ ಸಿದ್ಧಾಂತಕ್ಕೆ ಹೊಸ ಭಾಷೆ ಬರೆದರು. ಕಾಯಕ, ದಾಸೋಹ ಸಿದ್ಧಾಂತ ಸಮಾನವಾಗಿ ನಿಲ್ಲುವಂತೆ ಮಾಡಿದ ಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ. ಸಮ ಸಮಾಜ ನಿರ್ಮಿಸುವಲ್ಲಿ ಮೇಲು ಕೀಳು ಎನ್ನದೇ ಅನುಭವ ಮಂಟಪದಲ್ಲಿ ಎಲ್ಲರಿಗೂ ಅವಕಾಶ ಕೊಟ್ಟ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ ಎಂದು ಹೇಳಿ ಬಸವಣ್ಣನವರ ನಿಜ ಆಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ನಮ್ಮ ಬದುಕನ್ನು ಸುಂದರ ಮಾಡಿಕೊಳ್ಳಬೇಕೆಂದರು.



ಬಸವನಬಾಗೇವಾಡಿಗೆ ಕರ್ನಾಟಕದಲ್ಲಿ ಅಷ್ಟೇ ಯಾಕೆ ಭಾರತದಲ್ಲಿ ವಿಶೇಷ ಸ್ಥಾನಮಾನವಿದೆ. ಬಸವನಬಾಗೇವಾಡಿ ಜನತೆ ಅವರ ನಿಜವಾದ ತತ್ವವನ್ನು ಆಚರಿಸುವ ಮೂಲಕ ಜಗತ್ತಿಗೆ ಮಾದರಿಯಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರವಚನಕಾರರಾದ ಸ್ಥಳೀಯ ವಿರಕ್ತ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿದ ಬಸವಣ್ಣನವರು ದೇವ ಭಾಷೆಯನ್ನು ಜನ ಭಾಷೆಯನ್ನಾಗಿ ಪರಿವರ್ತಿಸಿದರು. ನಮ್ಮ ಇಂದಿನ ಯುವ ಜನಾಂಗಕ್ಕೆ ಬಸವಣ್ಣನವರ ನಿಜವಾದ ತತ್ವಗಳನ್ನು ಮುಟ್ಟಿಸುವ ಕೆಲಸ ನಮ್ಮಿಂದಾಗಬೇಕಾಗಿದೆ. ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತರಿಸುವ ಕೆಲಸವಾಗಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಗಂಭೀರವಾಗಿ ಆಲೋಚಿಸುವ ಅವಶ್ಯಕತೆ ಎಂದು ಹೇಳಿದ ಅವರು, ಇಡೀ ಜಗತ್ತೇ ಬಸವಣ್ಣನವರ ವಿಚಾರಗಳಿಗೆ ಮಾರುಹೋಗುವ ಈ ಸಂದರ್ಭದಲ್ಲಿ ನಾವು ನಮ್ಮ ಆತ್ಮಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಗವಾಯಿಗಳಾದ ರಾಜು ಗುಬ್ಬೇವಾಡ ಹಾಗೂ ಬಸನಗೌಡ ಪಾಟೀಲ ವಚನ ಗಾಯನ ನಡೆಸಿಕೊಟ್ಟರು.

# ರಾಜಕೀಯ ಸ್ವಾರ್ಥಕ್ಕಾಗಿ ಮಠಾಧೀಶರ ಬಗ್ಗೆ ಹಗುರವಾಗಿ ಮಾತನಾಡದಿರಿ

■ ಉದಯರಶ್ಮಿ ದಿನಪತ್ರಿಕೆ



ಬಸವನಬಾಗೇವಾಡಿ: ಕಾಂಗ್ರೆಸ್ ಪಕ್ಷದ ಜೊತೆಗೆ ಗುರುತಿಸಿಕೊಂಡಿರುವ ಅಹಿಂದ ಮುಖಂಡ ಎಸ್.ಎಂ. ಪಾಟೀಲ ಗಣಿಯಾರ ಅವರು ಮಠಾಧೀಶರ ಬಗ್ಗೆ ಆಡಿದ ಮಾತುಗಳು ಹಿಂದು ಸಮಾಜಕ್ಕೆ ನೋವನ್ನುಂಟು ಮಾಡಿದೆ. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮಠಾಧೀಶರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾದ ಕಾರ್ಯಕಾರಿಣಿ ಸಮಿತಿ ಸದಸ್ಯೆ ಸಾವಿತ್ರಿ ಕಲ್ಯಾಣಶೆಟ್ಟಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕನ್ನೇರಿ ಮಠದ ಶ್ರೀಗಳ ಬಗ್ಗೆ ಹಗುರವಾಗಿ ಮಾತನಾಡುವ ಮೂಲಕ ಹಿಂದು ಸಮಾಜಕ್ಕೆ ಅವಮಾನವಾಗುವಂತೆ ಮಾಡಿದ್ದಾರೆ. ಹೋರಾಟದಲ್ಲಿ ಕನ್ನೇರಿ ಮಠದ ಶ್ರೀಗಳು, ಪಂಚಮಸಾಲಿ ಸಮಾಜದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಸೇರಿದಂತೆ ನಾಡಿನ ಹಲವಾರು ಮಠಾಧೀಶರು ಭಾಗವಹಿಸಿದ್ದರು ಎನ್ನುವ ಸತ್ಯ ನಿಮಗೆ ಗೊತ್ತಿರಬೇಕು. ಮಠಾಧೀಶರು ಕೇವಲ ಮಠದಲ್ಲಿ ಕುಳಿತುಕೊಳ್ಳದೆ ಸಮಾಜಕ್ಕೆ ಸ್ಪಂದಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಅನ್ಯಾಯವನ್ನು ಸರಿ ಪಡಿಸುವ ನಿಟ್ಟಿನಲ್ಲಿ ಹೋರಾಟ ಮಾಡುವುದರಲ್ಲಿ ತಪ್ಪೇನಿದೆ. ಮಠಾಧೀಶರು ಸಮಾಜದ ಒಂದು ಭಾಗವಾಗಿದ್ದಾರೆ ಅನ್ನೋ ಸಾಮಾನ್ಯ ಜ್ಞಾನ ಅವರಿಗೆ ಇದ್ದಂತಿಲ್ಲ.

ನಿಮಗೆ ನಿಜವಾದ ಸಮಾಜದ ಕಳಕಳಿ ಇದ್ದರೆ ರೈತರಿಗೆ ಆದ ಅನ್ಯಾಯವನ್ನು ಸರಿಪಡಿಸುವಂತೆ ಸರಕಾರಕ್ಕೆ ಒತ್ತಾಯಿಸಬೇಕು. ಜೊತೆಗೆ ರೈತರ ಪರವಾಗಿ ತಾವು ನಿಲ್ಲಬೇಕು. ರೈತರು ಎಂದರೆ ಯಾವುದೇ ಜಾತಿ ಯಾವುದೇ ಧರ್ಮದವರಲ್ಲ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು. ವಕ್ಫ್ ವಿರುದ್ಧ ಕೇವಲ ಬಸನಗೌಡ ಪಾಟೀಲ ಅವರು ಹೋರಾಟ ಮಾಡಿಲ್ಲ. ಅವರೊಂದಿಗೆ ಎಲ್ಲ ಮಠಾಧೀಶರು ರೈತರು ಪಕ್ಷಾತೀತವಾಗಿ ಸೇರಿದ್ದರು ಎನ್ನುವರು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ಎಂ.ಎಸ್. ಪಾಟೀಲ ಗಣಿಯಾರ ಮಠಾಧೀಶರ ಕ್ಷಮೆ ಕೇಳಬೇಕೆಂದು ಸಾವಿತ್ರಿ ಕಲ್ಯಾಣಶೆಟ್ಟಿ ತಿಳಿಸಿದ್ದಾರೆ.

# ಪದ್ಯವಾಚನ ಸ್ಪರ್ಧೆ: ವಿಠೋಬಾ ಜಿಲ್ಲಾ ಮಟ್ಟಕ್ಕೆ ಆಯ್ಕೆ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಾಲೂಕಿನ ಧೂಳಖೇಡ ಗ್ರಾಮದ ಶ್ರೀ ಗುರು ಚಂದ್ರಶೇಖರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದ ಕವನ ಪದ್ಯವಾಚನ ಸ್ಪರ್ಧೆಯಲ್ಲಿ ಓಂ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ವಿಠೋಬಾ ಕರಂಡೆ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಹಾಗೂ ಧಾರ್ಮಿಕ ಪಠನದಲ್ಲಿ ಆಸಾದುಲ್ಲಾ ಖಾಟಿಕ ದ್ವಿತೀಯ ಸ್ಥಾನ ಪಡೆದಿದ್ದಾನೆ ಎಂದು ಮುಖ್ಯ ಶಿಕ್ಷಕ ಸುರೇಶ ಜಂತಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಓಂ ಶಿಕ್ಷಣ ಸಂಸ್ಥೆಯ ಸಂಸ್ಥೆಯ ಅಧ್ಯಕ್ಷ ಎಸ್ ಎಸ್ ಹಾವಿನಾಳ, ಆಡಳಿತ ಮಂಡಳಿ ಹಾಗೂ ಶಾಲಾ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಗ್ರಂಥಾಲಯ ಮೇಲ್ವಿಚಾರಕರಿಗೆ ನಾಯಕತ್ವ & ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲಾ ಪಂಚಾಯತಿ ಮತ್ತು ಡೆಲ್ ಟೆಕ್ನಾಲಜಿ ಮತ್ತು ಶಿಕ್ಷಣ ಫೌಂಡೇಶನ್ ಇವರ ಸಹಯೋಗದಲ್ಲಿ ನ.13ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅರಿವು ಕೇಂದ್ರಗಳ ಗ್ರಂಥಾಲಯ ಮೇಲ್ವಿಚಾರಕರಿಗೆ "ನಾಯಕತ್ವ ಹಾಗೂ ಕೌಶಲ್ಯಾಭಿವೃದ್ಧಿ" ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರಾದ ಬಿ. ಎಸ್. ರಾಠೋಡ ಅವರು ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಬಡ ಮಕ್ಕಳ ಇಚ್ಛಾ ಶಕ್ತಿಗೆ ಅನುಗುಣವಾಗಿ ಗ್ರಾಮೀಣ ಮಕ್ಕಳ ಶಿಕ್ಷಣದ ಗುಣಮಟ್ಟ ಉತ್ತಮಗೊಳಿಸುವ ನಿಟ್ಟಿನಲ್ಲಿ ಪಠ್ಯದಲ್ಲಿರುವ ವಿಷಯಗಳನ್ನು ಮಾತ್ರ ತಿಳಿಯದೆ ಸ್ಪರ್ಧಾತ್ಮಕ ಜ್ಞಾನದ ಬಗ್ಗೆಯೂ ಕೂಡ ಗಮನ ಹರಿಸುವಂತೆ ಅವರನ್ನು ಜಾಗೃತಗೊಳಿಸಬೇಕು. ಇದಕ್ಕೆ ಪೂರಕವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಾದ ಕೆ.ಎ.ಎಸ್, ಐ.ಎ.ಎಸ್, ಐ.ಪಿ.ಎಸ್, ಇಂಜಿನಿಯರಿಂಗ್ ಹೀಗೆ ಅನೇಕ ಪರೀಕ್ಷೆಗಳಿಗೆ ಓದಲು ಸಹಾಯಕವಾಗುವಂತೆಗ್ರಾಮಪಂಚಾಯತಿ ವತಿಯಿಂದ ವಿವಿಧ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಇರಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಗ್ರಂಥಾಲಯಗಳಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಡಿಜಿಟಲ್ ಪರಿಕರಗಳಾದ ಟಿವ್ಹಿ, ಮೊಬೈಲ್‌ಗಳನ್ನು ಪೂರೈಸಲಾಗಿದೆ. ಈ ಕುರಿತು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳನ್ನು ಗ್ರಂಥಾಲಯಗಳತ್ತ ಆಕರ್ಷಿಸಲು ಶ್ರಮವಹಿಸಬೇಕು ಎಂದು ಕಿವಿ ಮಾತು ಹೇಳಿದರು.

ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿ ಅನುಸೂಯಾ ಚಲವಾದಿ ಅವರು ಮಾತನಾಡಿ, ಗ್ರಂಥಾಲಯಗಳ ಮೇಲ್ವಿಚಾರಕರು ಗ್ರಂಥಾಲಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಸೇವೆಗಳನ್ನು ಒದಗಿಸಬೇಕು. ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಉತ್ತಮ ಗಾಳಿ, ಬೆಳಕು ಹಾಗೂ ಓದುಗರಿಗೆ ಆಸನದ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು. ಪ್ರತಿ ದಿನ ಕಡ್ಡಾಯವಾಗಿ ಇ-ಹಾಜರಾತಿ ಮೂಲಕ ಹಾಜರಾತಿ ಸಲ್ಲಿಸಬೇಕು. ಗ್ರಂಥಾಲಯಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಸಾರ್ವಜನಿಕರು ಸಮರ್ಪಕವಾಗಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಸದುಪಯೋಗಪಡಿಸುವಂತೆ ಗ್ರಾಮಗಳಲ್ಲಿ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿಯ ಆಡಳಿತ ಶಾಖೆಯ ಅಧೀಕ್ಷಕರಾದ ತಹಸೀನ ಗುಣಕಿ, ಜಿ.ಪಂ ನ ಆಡಳಿತ ಶಾಖೆಯ ಪ್ರಥಮ ದರ್ಜೆ ಸಹಾಯಕರಾದ ಗೌರಮ್ಮ ಪಾಟೀಲ, ಜಿಲ್ಲಾ ಯೋಜನಾ ವ್ಯವಸ್ಥಾಪಕರಾದ ಅರವಿಂದ ಬಿರಾದಾರ, ತರಬೇತುದಾರರಾದ ಮಲ್ಲಿಕಾರ್ಜುನ ಪಕೀರಪ್ಪಗೋಳ, ಗ್ರಂಥಾಲಯದ ಹಿರಿಯ ಮೇಲ್ವಿಚಾರಕರಾದ ಶಿವಾನಂದ ದೇಸಾಯಿ, ಗ್ರಾಮ ಡಿಜಿ ವಿಕಾಸನ ಜಿಲ್ಲಾ ಸಂಯೋಜಕಿ ಇಂದು ಬಿ., ಸಂಯೋಜಕರಾದ ನಾಗೇಶ ಅಂಬುರೆ, ಯಲಗೂರ ಗ್ರಾ.ಪಂ. ಗ್ರಂಥಾಲಯದ ಮೇಲ್ವಿಚಾರಕರಾದ ಯಲಗೂರೇಶ ಬಿ ಪಾತ್ರದ ಹಾಗೂ ಬಸವನ ಬಾಗೇವಾಡಿ, ವಿಜಯಪುರ ಮತ್ತು ನಿಡಗುಂದಿ ತಾಲೂಕುಗಳ ಎಲ್ಲ ಗ್ರಂಥಾಲಯ ಮೇಲ್ವಿಚಾರಕರು ಉಪಸ್ಥಿತರಿದ್ದರು.

# ವಚನ ಅಧ್ಯಯನ ವೇದಿಕೆ & ಅಕ್ಕನ ಅರಿವು ಸದಸ್ಯರ ಕೃತಿ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ



ಬಸವಕಲ್ಯಾಣ: ಅನುಭವ ಮಂಟಪ ಅಭಿವೃದ್ಧಿ ಪ್ರಾಧಿಕಾರ ಮತ್ತು ಬಸವ ತಿಳುವಳಿಕೆ ಮತ್ತು ಅಧ್ಯಯನ ಕೇಂದ್ರ - ಪುಣೆ ಇದರ ವತಿಯಿಂದ ಬಸವಕಲ್ಯಾಣದಲ್ಲಿ ನಡೆದ ಸಮಾರಂಭದಲ್ಲಿ ಅಕ್ಕನ ಅರಿವು ಮತ್ತು ವಚನ ಅಧ್ಯಯನ ವೇದಿಕೆಯ ಸದಸ್ಯರ ಒಟ್ಟು ಐದು ಪುಸ್ತಕಗಳು ಬಿಡುಗಡೆಯಾದವು.

ಶರಣೆ ಸುಧಾ ಪಾಟೀಲ ಅವರ ಮೂರು ಪುಸ್ತಕಗಳು ಲೋಕಾರ್ಪಣೆಗೊಂಡವು. ಅದರಲ್ಲಿ " ಶರಣರ ನೆನೆದರ ಸರಗಿಯ ಇಟ್ಟಂಗ" ಶರಣರ ಪರಿಚಯ ಮತ್ತು ವಚನ ವಿಶ್ಲೇಷಣೆ ಕೃತಿಯನ್ನು ಡಾ..ಬಾಬಾಸಾಹೇಬ ಗಡ್ಡೆ ಅವರು, "ಹೃದಯದ ಮಾತು" ಕವನ ಸಂಕಲನವನ್ನು ಡಾ.ಉಮಾಕಾಂತ ಶೇಟ್ಕರ ಅವರು, "ಚುಕ್ಕಿ ಹೇಳಿದ ಕಥೆ" ಕವನ ಸಂಕಲನವನ್ನು ಶರಣೆ ಗೌರಮ್ಮ ನಾಶಿ ಅವರು ಲೋಕಾರ್ಪಣೆಗೊಳಿಸಿದರು.

ಡಾ.ಶರಣಮ್ಮ ಗೋರೆಬಾಳ ಅವರ "ಮತ್ತೆ ನಕ್ಕಿತು ಭೂಮಿ" ಕವನ ಸಂಕಲನವನ್ನು ಡಾ.ವೀಣಾ ಎಲಿಗಾರ ಅವರು ಬಿಡುಗಡೆಗೊಳಿಸಿದರು. ಶರಣೆ ಬಸಮ್ಮ ಭರಮಶೆಟ್ಟಿ ಅವರ "ಬಾಡದಿರಲಿ ಸ್ನೇಹ "ಕವನ ಸಂಕಲನವನ್ನು ಡಾ.ಜಯಶ್ರೀ ಪಟ್ಟಣ ಮತ್ತು ಡಾ.ಶಶಿಕಾಂತ ಪಟ್ಟಣ ಅವರು ಲೋಕಾರ್ಪಣೆಗೊಳಿಸಿದರು.

ಡಾ.ಶಶಿಕಾಂತ ಪಟ್ಟಣ ಮೂವರೂ ಸಾಹಿತಿಗಳನ್ನು ಪರಿಚಯಿಸಿ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಅಕ್ಕನ ಅರಿವು ಬಳಗದ ಹಿರಿಯ ಸದಸ್ಯೆ ಪ್ರೊ.ಶಾರದಮ್ಮ ಪಾಟೀಲ, ಡಾ.ದಾನಮ್ಮ ಝಳಕಿ, ಡಾ.ಗೀತಾ ಡಿಗ್ಗೆ, ಡಾ.ಸುಧಾ ಕೌಜಗೇರಿ, ಡಾ.ಕಸ್ತೂರಿ ದಳವಾಯಿ, ಡಾ.ಬಸಮ್ಮ ಗಂಗನಳ್ಳಿ, ಡಾ.ಮೀನಾಕ್ಷಿ ಪಾಟೀಲ್, ಡಾ.ಸಂಗಮೇಶ ಕಲಹಾಳ ಮತ್ತು ಅಕ್ಕನ ಅರಿವು ಸದಸ್ಯರು ಭಾಗಿಯಾಗಿದ್ದರು.

## ಗೌರವ ಸನ್ಮಾನ

ಇದೇ ಸಂದರ್ಭದಲ್ಲಿ ಡಾ.ಶಶಿಕಾಂತ ಪಟ್ಟಣ, ಡಾ.ಜಯಶ್ರೀ ಪಟ್ಟಣ, ಶರಣೆ ಜಯದೇವಿ ಯಾದಲಾಪುರೆ ಮತ್ತು ಶರಣೆ ಸ್ವರೂಪಾರಾಣಿ ನಾಗೂರೆ ಅವರು ಮೂವರು ಕೃತಿ ರಚನೆಕಾರರನ್ನು ಸನ್ಮಾನಿಸಿ ಗೌರವಿಸಿದರು.

# ನ.15 ರಂದು ವಿದ್ಯುತ್ ವ್ಯತ್ಯಯ

ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 110/11 ಕೆವಿ ಝಳಕಿಯಿಂದ ಹೊರಡುವ 33/11 ಕೆವಿ ನಿವರಗಿ ವಿದ್ಯುತ್ ವಿತರಣಾ ಕೇಂದ್ರದ ಶಕ್ತಿ ಪರಿವರ್ತಕದ ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಎಲ್ಲಾ 11 ಕೆವಿ ಮಾರ್ಗಗಳಲ್ಲಿ ದಿನಾಂಕ:15-11-2024 ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಇಂಡಿ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR